بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 25

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಜೂನ್ 2022, 23 ಇಹ್ಸಾನ್ 1401 ಹಿಜರಿ ಶಮ್‌ಸಿ,
22 ಧಿಲ್ ಖಅ್‌ದಃ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَاَطِيْعُوا اللّٰهَ وَاَطِيْعُوا الرَّسُوْلَ
وَاحْذَرُوْا ۚ فَاِنْ تَوَلَّيْتُمْ فَاعْلَمُوْٓا اَنَّمَا عَلٰى
رَسُوْلِنَا الْبَلٰغُ الْمُبِيْنُ

(ಅಲ್ ಮಾಇದಃ : 93)

**ಅಂದರೆ: ನೀವು ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಈ ಸಂದೇಶವಾಹಕನಿಗೂ ವಿಧೇಯರಾಗಿರಿ ಹಾಗೂ ಜಾಗರೂಕರಾಗಿದ್ದುಕೊಳ್ಳಿರಿ. ಆದರೆ ನೀವು ವಿಮುಖರಾದರೆ, ನಮ್ಮ ಸಂದೇಶವನ್ನು ಸ್ಪಷ್ಟವಾದ ರೀತಿಯಲ್ಲಿ ನಿಮಗೆ ತಲಪಿಸುವುದು ಮಾತ್ರವೇ ನಮ್ಮ ಸಂದೇಶವಾಹಕನ ಕರ್ತವ್ಯವೆಂದು ತಿಳಿದುಕೊಳ್ಳಿರಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಅನುಮಾನಗಳನ್ನು ತಪ್ಪಿಸಿಕೊಳ್ಳಲು ಸಲಹೆ

(2051) ಹಝ್ರತ್ ನೂಮಾನ್ ಬಿನ್ ಬಶೀರ್(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಪ್ರವಾದಿ(ಸ) ಹೇಳಿದರು: ಹಲಾಲ್ ಸಹ ಸ್ಪಷ್ಟವಾಗಿದೆ ಮತ್ತು ಹರಾಮ್ ಸಹ ಸ್ಪಷ್ಟವಾಗಿದೆ ಇದರ ನಡುವೆ ಕೆಲವು ಅನುಮಾನಗಳಿವೆ. ಆದ್ದರಿಂದ ಯಾವುದರಲ್ಲಿ ಪಾಪದ ಅನುಮಾನವಿರುತ್ತದೆಯೋ ಅವನು ಮೊದಲು ಪಾಪವನ್ನು ತ್ಯಜಿಸುವವನಾಗಬೇಕು. ಯಾರು ಪಾಪದ ಅನುಮಾನವಿರುವ ಕೆಲಸ ಮಾಡುತ್ತಾನೋ ಅವನು ಸ್ಪಷ್ಟವಾಗಿ ಪಾಪಿಷ್ಟನಾಗಿರುತ್ತಾನೆ. ಮತ್ತು ಅವಿಧೇಯತೆಯ ವಿಷಯಗಳು ಅಲ್ಲಾಹನು ನಿಷೇಧಿಸಿರುವ ಹುಲ್ಲುಗಾವಲಾಗಿದೆ. ಆ ಹುಲ್ಲುಗಾವಲಿನ ಸುತ್ತಲೂ ಮೇಯುವವನು ಅದರೊಳಗೆ ಪ್ರವೇಶಿಸಲಿದ್ದಾನೆ.

(2056) ಅಬ್ದುಲ್ಲಾ ಬಿನ್ ಝೈದ್ ಮಾಝಿನಿ ವರದಿ ಮಾಡುತ್ತಾರೆ: ಪ್ರವಾದಿ(ಸ) ಅವರಲ್ಲಿ ಒಬ್ಬ ವ್ಯಕ್ತಿ ಪ್ರಾರ್ಥನೆಯಲ್ಲಿ ಹೂಸು ಬಿಡುತ್ತಾನೆ ಎಂದು ದೂರಲಾಗಿದೆ ಎಂದು ವಿವರಿಸಲಾಗಿದೆ. ಹೀಗಿರುವಾಗ ಅವನು ಪ್ರಾರ್ಥನೆಯನ್ನು ಮುರಿಯಬೇಕೇ? ಅವರು ಹೇಳಿದರು: ಇಲ್ಲ, ಅವರು ಧ್ವನಿ ಕೇಳಿದರೆ ಅಥವಾ ವಾಸನೆ ನೋಡಿದರೆ ವಝು ಮಾಡಬೇಕು. ಮತ್ತು (ಮುಹಮ್ಮದ್) ಇಬ್ನ್ ಅಬಿ ಹಫ್ಸಾ ಅವರು ಜುಹ್ರಿಯಿಂದ ವಿವರಿಸಿದರು, ನೀವು ಶಬ್ದವನ್ನು ಕೇಳಿದಾಗ ಅಥವಾ ವಾಸನೆ ನೋಡಿದಾಗ ವಝು ಅಗತ್ಯವಾಗುತ್ತದೆ.

**(ಸಹೀಹ್ ಬುಖಾರಿ, ಸಂಪುಟ–4, ಕಿತಾಬ್ ಅಲ್–ಬಯೌ, 2008 ಖಾದಿಯಾನ್)**

## ಕೇಳಿರಿ! ಪವಿತ್ರ ಖುರ್‌ಆನ್ ಹೇಳಿರುವುದು "ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್" ಅಲ್ಲಾಹನು ಧರ್ಮನಿಷ್ಠರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ, ಯಾರು ಧರ್ಮನಿಷ್ಠರಲ್ಲ, ಅವರ ಪ್ರಾರ್ಥನೆಗಳು ಸ್ವೀಕಾರದ ವಸ್ತ್ರದಿಂದ ಬೆತ್ತಲೆಯಾಗಿರುತ್ತವೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಾವು ಬಹಳ ಪ್ರಾರ್ಥಿಸಿದ್ದೇವೆ ಆದರೆ ಏನೂ ಪ್ರಯೋಜನವಾಗಲಿಲ್ಲ ಎಂದು ಹಲವರು ಹೇಳುವುದನ್ನು ನಾನು ಕೇಳಿದ್ದೇನೆ. ಮತ್ತು ಈ ಫಲಿತಾಂಶವು ಅವರನ್ನು ನಾಸ್ತಿಕರನ್ನಾಗಿಯೂ ಮಾಡಿತು. ವಾಸ್ತವವೇನೆಂದರೆ ಪ್ರತಿಯೊಂದಕ್ಕೂ ನೀತಿ, ನಿಯಮಗಳಿವೆ. ಹೀಗೆಯೇ ಪ್ರಾರ್ಥನೆಗಳಿಗೂ ಸಹ ನೀತಿ ನಿಯಮಗಳಿವೆ. ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಲಾಗಿಲ್ಲ ಎಂದು ಈ ಜನರು ಹೇಳಲು ಕಾರಣ ಅವರು ಪ್ರಾರ್ಥನೆಯ ಸ್ವೀಕಾರಕ್ಕೆ ಅಗತ್ಯವಾದ ನಿಯಮಗಳನ್ನು ಪಾಲಿಸದಿರುವುದು.

ಸರ್ವಶಕ್ತನಾದ ಅಲ್ಲಾಹನು ನಮಗೆ ಅಪ್ರತಿಮ ಮತ್ತು ಅಮೂಲ್ಯವಾದ ನಿಧಿಯನ್ನು ಪ್ರಸ್ತುತಪಡಿಸಿದಾಗ ನಾವೆಲ್ಲರೂ ಅದನ್ನು ಪಡೆಯಬಹುದು ಮತ್ತು ತೆಗೆದುಕೊಳ್ಳಬಹುದು. ಏಕೆಂದರೆ ಸರ್ವಶಕ್ತನಾದ ಅಲ್ಲಾಹನಿಗೆ ನಾವು ಸರ್ವಶಕ್ತ ಎಂದು ನಂಬಿ ಅವನು ನಮ್ಮ ಮುಂದೆ ಏನನ್ನು ಇರಿಸಿದ್ದಾನೋ ಮತ್ತು ಅವನು ಏನನ್ನು ನಮಗೆ ತೋರಿಸಿದ್ದಾನೋ, ಇವೆಲ್ಲವು ಕೇವಲ ಮರೀಚಿಕೆ ಮತ್ತು ವಂಚನೆ ಎಂದು ಸೂಚಿಸಲು ನಮಗೆ ಎಂದಿಗೂ ಅನುಮತಿಸಲಾಗಿಲ್ಲ. ಅಂತಹ ಭ್ರಮೆಯು ಸಹ ಮನುಷ್ಯನನ್ನು ಕೊಲ್ಲುತ್ತದೆ. ಇಲ್ಲ, ಬದಲಿಗೆ ಪ್ರತಿಯೊಬ್ಬರೂ ಈ ನಿಧಿಯನ್ನು ತೆಗೆದುಕೊಳ್ಳಬಹುದು ಮತ್ತು ಸರ್ವಶಕ್ತನಾದ ಅಲ್ಲಾಹನಲ್ಲಿ ಯಾವುದೇ ಕೊರತೆಯಿಲ್ಲ. ಅವನು ಈ ಸಂಪತ್ತನ್ನು ಎಲ್ಲರಿಗೂ ನೀಡಬಹುದು, ಆದರೂ ಅವನ ನಿಧಿ ಕಡಿಮೆಯಾಗುವುದಿಲ್ಲ.

ಹೀಗೆ ನುಬುವ್ವತ್‌ನ ಪರಿಪೂರ್ಣತೆಗಳನ್ನು ಸಹ ನಮಗೆ ನೀಡಲು ಅವನು ಸಿದ್ಧನಾಗಿದ್ದಾನೆ, ಆದರೆ ನಾವು ಅದನ್ನು ತೆಗೆದುಕೊಳ್ಳಲು ಪ್ರಯತ್ನಿಸಬೇಕು. ಆದ್ದರಿಂದ ನೆನಪಿಡಿ! ಪ್ರಾರ್ಥನೆಯನ್ನು ಸ್ವೀಕರಿಸುವುದಿಲ್ಲ ಎಂಬುದು ಸೈತಾನನ ಮಾತು ಮತ್ತು ವಂಚನೆಯಾಗಿದೆ. ಸತ್ಯವೆಂದರೆ ಪ್ರಾರ್ಥನೆಯು ಕೇವಲ ಶಿಷ್ಟಾಚಾರ ಮತ್ತು ಸ್ವೀಕಾರದ ವಿಧಾನಗಳಿಂದ ದೂರವಿರುತ್ತದೆ. ಆಗ ಅವನಿಗೆ ಸ್ವರ್ಗದ ಬಾಗಿಲು ತೆರೆಯುವುದಿಲ್ಲ. ಕೇಳಿರಿ! ಪವಿತ್ರ ಖುರ್‌ಆನ್ ಏನು ಹೇಳಿರುವುದು "ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್" (ಅಲ್–ಮಾಯಿದ: 28) ಅಲ್ಲಾಹನು ಮುತ್ತಖೀಯರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ಧರ್ಮನಿಷ್ಠರಲ್ಲದವರ ಪ್ರಾರ್ಥನೆಗಳು ಸ್ವೀಕಾರದ ವಸ್ತ್ರದಿಂದ ಬೆತ್ತಲೆಯಾಗಿದೆ. ಹೌದು, ಅಲ್ಲಾಹನ ಗುಣಲಕ್ಷಣವಾದ "ರಬೂಬಿಯ್ಯತ್" (ಪ್ರಭು) ಹಾಗೂ "ರಹ್ಮಾನಿಯ್ಯತ್" (ಕರುಣಾಮಯಿ) ಅವರ ಪಾಲನೆ ಪೋಷಣೆಯಲ್ಲಿ ನಿರತವಾಗಿದೆ.

**(ಮಲ್‌ಫೂಝಾತ್, ಸಂಪುಟ–1, ಪುಟ–377, ಪ್ರಕಟಿತ 2018 ಖಾದಿಯಾನ್)**

## ನಬಿ (ಪ್ರವಾದಿ) ಯೂ ಅಲ್ಲಾಹನ ಅನುಗ್ರಹದಿಂದ ಮುಗ್ಧನಾಗಿರುತ್ತಾನೆ. ಆಗಲೂ ಅವರು "ಇಗ್ಫ್‌ಫಿರ್‌ಲಿ", ಎನ್ನುವುದು ಏನು ಅರ್ಥ? ಸತ್ಯವಿಶ್ವಾಸಿಯ ವಿವಿಧ ದರ್ಜೆಗಳ ನೆಲೆಯಲ್ಲಿ "ಇಗ್ಫ್‌ಫಿರ್‌ಲಿ" ವಿವಿಧ ಅರ್ಥಗಳು.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಇಬ್ರಾಹಿಂ ವಚನ 42 **ರಬ್ಬನಗ್ ಫಿರ್‌ಲಿ ವಲಿವಾಲಿದೈಯ ವಲಿಲ್ ಮುಮಿನೀನ ಯೌಮ ಯಖೂಮುಲ್ ಹಿಸಾಬ್** ರನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ.

ನಬಿ (ಪ್ರವಾದಿ) ಯೂ ಅಲ್ಲಾಹನ ಅನುಗ್ರಹದಿಂದ ಮುಗ್ಧನಾಗಿರುತ್ತಾನೆ. ಆಗಲೂ ಅವರು "ಇಗ್ಫ್‌ಫಿರಲಿ" ಎನ್ನಲು ಏನು ಕಾರಣ? ವಾಸ್ತವವೇನೆಂದರೆ ಆಧ್ಯಾತ್ಮಿಕ ಜ್ಞಾನ ಇಲ್ಲದವರ ದೃಷ್ಟಿ ಸೀಮಿತವಾಗಿರುತ್ತದೆ. ಇದ್ದವರ ದೃಷ್ಟಿ ಅಪರಿಮಿತವಾಗಿರುತ್ತದೆ ಮತ್ತು ಉನ್ನತಿ ಸಾಧಿಸುತ್ತಾ ಹೋಗುತ್ತದೆ. ಅಲ್ಲಾಹನ ಮುಂದೆ ನಮ್ಮದೇನು ಯಾವ ಹೈಸತ್ತು ಎಂಬ ತಿಳುವಳಿಕೆ ಅವರಿಗಿರುತ್ತದೆ. ಏಕೆಂದರೆ ಮನುಷ್ಯ ಅವನ ಸೃಷ್ಟಿ ತಾನೇ ಅವನ ಜೀವನವು ಅವನೇ ನೀಡಿದ್ದಾಗಿದೆ. ಮತ್ತು ಮಾರ್ಗದರ್ಶನವು ಸಹ ಅವನಿಂದಲೇ ಬರುವಂತಹದ್ದಾಗಿದೆ. ಕವಿ ಗ್ಹಾಲಿಬ್ ಎಷ್ಟು ಚೆನ್ನಾಗಿ ಹೇಳಿದ್ದಾರೆ.

ಜಾನ್ ದೀ ದೀಹುಇ ಉಸೀಕೀ ಥೀ
ಹಖ್ ತೋ ಏ ಹೈ ಕೆ ದಖ್ ಅದಾ ನ ಹುವಾ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ❁ شَرُّ السُّمُوْمِ عَدَاوَۃُ الصُّلَحَاءِ

**ಕಸೂಫ್ ವ ಖುಸೂಫ್ (ಚಂದ್ರ ಮತ್ತು ಸೂರ್ಯಗ್ರಹಣ) ಹದೀಸನ್ನು ಯಾವುದೇ ಹದೀಸುಗಾರರಿಂದ ದುರ್ಬಲವೆಂದು ನಿರ್ಧರಿಸಲ್ಪಟ್ಟಿಲ್ಲ. ಒಂದು ವೇಳೆ ಈ ಹದೀಸನ್ನು ದುರ್ಬಲವೆಂದು ಸಾಬೀತುಗೊಳಿಸಿದರೆ ಒಂದುನೂರು ರೂಪಾಯಿ ಬಹುಮಾನ ಕೊಡುವೆನು.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಹ್ವಾನ ನಾವು ಅವರ ಗ್ರಂಥ "ತೊಹಫ ಗೋಡವಿಯ, ರೂಹಾನಿ ಖಝಾಯಿನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಪ್ರಕಟಪಡಿಸಲು ಅಲ್ಲಾಹನು ತನ್ನ ಪ್ರಿಯ ನಬಿ ಸಯ್ಯದನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಶುಭ ನುಡಿಯ ಪ್ರಕಾರ ಸೂರ್ಯ ಚಂದ್ರಗ್ರಹಣದ ಮಹೋನ್ನತವಾದ ಭವಿಷ್ಯವಾಣಿ 1894 ರಲ್ಲಿ ಪೂರ್ಣ ಗೊಂಡಿತು. ಆಗ ಉಲಮಾಗಳು ಈ ಹದೀಸಿನ ಮೇಲೆ ಆಕ್ಷೇಪಗಳನ್ನು ಎತ್ತಲು ಪ್ರಾರಂಭಿಸಿದರು. ಒಂದು ಆಕ್ಷೇಪ ಹೀಗಿತ್ತು. ಈ ಹದೀಸು ದುರ್ಬಲವಾಗಿದೆ. ಅಂದರೆ ಇದು ಮಾನವ ಕಲ್ಪಿತವಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರದ್ದಲ್ಲ. ಈ ಬಗ್ಗೆ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಗೋಚರ ಮತ್ತು ವಿಶ್ವಾಸವರ್ಧಕ ಅಧ್ಯಾಪನೆಗಳನ್ನು ನಾವು ಹಿಂದಿನ ಸಂಚಿಕೆಗಳಲ್ಲಿ ಪ್ರಸ್ತುತಪಡಿಸಿರುತ್ತೇವೆ. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ ವಿವಿಧ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟರು. ಈ ಹದೀಸಿನಲ್ಲಿ ವಿವರಿಸಲ್ಪಟ್ಟ ಭವಿಷ್ಯವಾಣಿ ಎಲ್ಲ ರೀತಿಯಲ್ಲೂ ಸಮಯಾನುಸಾರ ಪೂರ್ಣಗೊಂಡಿರುವಾಗ ಎಲ್ಲ ಆಕ್ಷೇಪಗಳು ತನ್ನ ತಾನೇ ರದ್ದುಗೊಳ್ಳುತ್ತವೆ. ಏಕೆಂದರೆ ಅಲ್ಲಾಹನ ಈ ಭವಿಷ್ಯವಾಣಿಯ ಸತ್ಯತೆ ಜಾಹೀರುಪಡಿಸಿದೆ. ಅದರಿಂದ ಸಾಬೀತಾಯಿತು. ಈ ಭವಿಷ್ಯವಾಣಿ ಸತ್ಯವಾದಿಗಳ ಸತ್ಯವಾದಿಯಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರಿಂದಲೇ ಈ ಹದೀಸ್ ವ್ಯಕ್ತವಾಗಿದೆ. ಇಂತಹ ಮಹೋನ್ನತ ಭವಿಷ್ಯವಾಣಿ ಯಾವುದೇ ಮನುಷ್ಯನಿಂದ ಸಾಧ್ಯವಿಲ್ಲ. ಅಲ್ಲಾಹನು ಹೇಳುತ್ತಾನೆ 'ಇಂತಹ ಭವಿಷ್ಯವಾಣಿಗಳು ಕೇವಲ ತನ್ನ ಸಂದೇಶವಾಹಕರಿಗೆ ಮಾತ್ರ ನೀಡುತ್ತೇನೆ.'

ಮತ್ತೊಂದು ಪ್ರಶ್ನೆ ಏಳಬಹುದು. ಇಮಾಮ್ ದಾರು ಖುತುನಿ ಒಂದು ದುರ್ಬಲ ಹದೀಸನ್ನು ತನ್ನ ಮಹೋನ್ನತ ಗ್ರಂಥದಲ್ಲಿ ಸೇರಿಸಿದ್ದರೇ? ಈ ಹದೀಸಿನ ವರದಿಗಾರರು ಸುಳ್ಳುವಾದಿಗಳಾಗಿದ್ದರೆ ಇಮಾಮ್ ದಾರುಖುತುನಿ ಆ ವರದಿಗಾರರ ಅಹವಾಲುಗಳಿಂದ ಆಯಸ್ಸುಪೂರ್ತಿ ಅಜ್ಞಾತರಾಗಿದ್ದರೆ, ಅದರೆ ಅಲ್ಲಾಹನು ಈ ಭವಿಷ್ಯವಾಣಿ ಪೂರ್ತಿಗೊಳಿಸಿದಾಗ, ಈ ಹದೀಸಿನ ಮಹೋನ್ನತ ಸ್ಥಾನ, ವರದಿಗಾರರ ಸತ್ಯ ಜಗಜ್ಜಾಹೀರಾಯಿತು. ಆಕ್ಷೇಪ ಮಾಡುವವರೇ ಸುಳ್ಳುವಾದಿಗಳಾಗಿದ್ದಾರೆ ಎಂದು. ಅವರ ದೃಷ್ಟಿಯಲ್ಲಿ ಅಲ್ಲಾಹನ ಮತ್ತು ಅವನ ಪ್ರವಾದಿಯ ಯಾವ ಗೌರವವೂ ಇಲ್ಲ. ನಾವು ಇಲ್ಲಿ ಇಮಾಮ್ ದಾರುಕುತುನಿ ಅವರ ಸಂಕ್ಷಿಪ್ತ ರೂಪದಲ್ಲಿ ಅವರ ಜೀವನ ಚರಿಕತ್ರೆಯ ಬಗ್ಗೆ ವಿವರಸಲಿದ್ದೇವೆ. ಅದರಿಂದ ಅವರ ಸ್ಥಾನಮಾನ ಅಂದಾಜಿಸಬಹುದು. ಅವರ ಹೆಸರು ಅಬುಲ್‌ಹಸನ್ ಆಲಿ ಬಿನ್ ಉಮರ್ ಆಗಿದೆ. ತಂದೆಯ ಹೆಸರು ಉಮರ್ ಬಿನ್ ಅಹ್ಮದ್, ಅವರು ಸುಪ್ರಸಿದ್ಧ ಹದೀಸುಗಾರರಲ್ಲಿ ಒಬ್ಬರಾಗಿದ್ದರು. ಇಮಾಮ್ ದಾರುಖುತುನಿ 306 ಹಿಜರಿ 918 ಇಸವಿಯಲ್ಲಿ ಬಾಗ್ದಾದ್‌ನ ಊರಾದ "ದಾರುಲ್‌ಖುತುನ್" ಅಲ್ಲಿ ಜನ್ಮ ತಾಳಿದರು. ಅದರಿಂದ ಅವರನ್ನು "ದಾರುಖುತುನಿ" ಹೆಸರಿನಿಂದ ಪ್ರಸಿದ್ಧರಾದರು. 385 ಹಿಜರಿಯಲ್ಲಿ ಅವರ ನಿಧನವಾಯಿತು. 9 ವರ್ಷ ವಯಸ್ಸಿನಿಂದಲೇ ಹದೀಸಿನ ಜ್ಞಾನ ಪಡೆಯಲು ಮಗ್ನನಾದರು. ಹದೀಸುಗಳು ಆಲಿಸಲು ಮತ್ತು ವರದಿಗಳನ್ನು ಬರೆಯಲು ಹಾಗೂ ಸಂಗ್ರಹಿಸಲು ಪ್ರಯತ್ನಶೀಲರಾದರು. ನೆನಪಿನ ಶಕ್ತಿ ಪ್ರಬಲವಾಗಿತ್ತು. ಆ ಸಮಯದಲ್ಲಿ ಬಾಗ್ದಾದ್ ವಿದ್ಯೆ ಕೇಂದ್ರವಾಗಿತ್ತು. ದೊಡ್ಡ ದೊಡ್ಡ ಮತಪಂಡಿತರ ಕೇಂದ್ರವಾಗಿತ್ತು. ಅಲ್ಲಿ ದಾರುಖುತುನಿ ತರಬೇತಿ ಪಡೆದರು. ದೊಡ್ಡ ದೊಡ್ಡ ಗುರುಗಳಿಂದ ಮತ್ತು ಇಮಾಮರುಗಳಿಂದ ಶಿಕ್ಷಣ ಪಡೆದರು. ಈ ಸಂಬಂಧ ಮಿಸರ್ ಮತ್ತು ಶಾಮ್ ಪ್ರವಾಸ ಸಹ ಕೈಗೊಂಡರು. ಹದೀಸು ವಿದ್ಯೆಯಲ್ಲಿ ತನ್ನ ಕಾಲದ ಪರಿಣತರಲ್ಲಿ ಒಬ್ಬರಾಗಿದ್ದರು. ಅಸ್ಮಾಉರ್ ರಿಜಾಲ್‌ರ ಮೇಧಾವಿಯಾಗಿದ್ದರು. ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅದರಲ್ಲಿ "ಸುನನ್ ದಾರುಖುತುನಿ" ಅವರ ಗೌರವವಾಗಿದೆ. ಇಮಾಮ್ ಝುಹಬಿ ಅವರ ಕುರಿತು "ಸೈರ್ ಅಲಾಮುನ್ನಜ್‌ಲಾ' ನಲ್ಲಿ ಬರೆಯುತ್ತಾರೆ. ಅವರು ವಿದ್ಯಾಸಾಗರ ಮತ್ತು ಲೋಕದ ಇಮಾಮರಾಗಿದ್ದರು. ಕಂಠಸ್ತ ಮತ್ತು ಹದೀಸ್ ಸಂಗ್ರಹ ಹಾಗೂ ರಿಜಾಲ್ ವಿದ್ಯೆಯಲ್ಲಿ ಉನ್ನತ ಸ್ಥಾನ ಪಡೆದಿದ್ದರು. ಅಲ್ಲದೇ ಪಠಣ, ಫಿಖಾ, ಭಿನ್ನತೆ, ಮಗಾಝಿ ಹಾಗೂ ಇತಿಹಾಸ ಮುಂತಾದವುಗಳಲ್ಲಿ ಸಹ ಮಹಾನತೆ ಪಡೆದಿದ್ದರು. ಅಬೂಬಕರ್ ಖತೀಬ್ ಹೇಳುತ್ತಾರೆ. ದಾರುಖುತುನಿ ತನ್ನ ಕಾಲದ ತಜ್ಞರಾಗಿದ್ದರು. ಕಾಲದ ಇಮಾಮರಾಗಿದ್ದರು. ಹದೀಸು, ಇಲಲ್ ಮತ್ತು ಅಸ್ಮಾಉರ್ ರಿಜಾಲ್‌ನಲ್ಲಿ ಅವರು ಏಕೈಕ ಮೇಧಾವಿಯಾಗಿದ್ದರು.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಅವರು ಸಹಿ ಬುಖಾರಿಗೆ ಸರಿಗಟ್ಟುವಂತಹ ವ್ಯಕ್ತಿಯಾಗಿದ್ದಾರೆ. ಅವರ ವ್ಯಕ್ತಿತ್ವದಲ್ಲಿ ಯಾರಿಗೂ ಸಂಶಯವಿಲ್ಲ. ಈ ಹದೀಸು ಇಮಾಮ್ ಬಾಬರ್(ರ) ಅವರಿಂದ ವರದಿಯಾಗಿದೆ. ಇಮಾಮ್ ಬಾಬರ್(ರಹ) ಅವರ ಸ್ಥಾನಮಾನವೇನು. ಗಮನಿಸಿ-ಅವರ ಹೆಸರು ಮುಹಮ್ಮದ್, ಪದನಾಮ ಅಬುಜಾಫರ್ ಮತ್ತು ಲಖಬ್ ಬಾಬರ್ ಎಂದಾಗಿತ್ತು. ಅವರು ಇಮಾಮ್ ಝೈಯಲ್ ಅಬಿದೀನ್ ರವರ ಹಿರಿಯ ಪುತ್ರರಾಗಿದ್ದರು. ಹಝ್ರತ್ ಇಮಾಮ್ ಹುಸೇನ್(ರ) ರವರ ಮೊಮ್ಮಗ ಮತ್ತು ಶೇರೆ ಬುದಾ ಹಝ್ರತ್ ಅಲ್(ರ) ಮತ್ತು ಫರ್ಗದ ಸರದಾರರಾದ ಹಝ್ರತ್ ಫಾತಿಮಾ ಝುಹತ್(ರ) ರವರ ಮರಿ ಮಕ್ಕಳಾಗಿದ್ದರು. ಅವರ ತಾಯಿ ಹಝ್ರತ್ ರಸೂಲುಲ್ಲಾಹ್(ಸ) ರವರ ಮೊಮ್ಮಗಳು ಹಜ್‌ರತ್ ಅಲಿ ಮತ್ತು ಫಾತಿಮಾರವರ ಹಿರಿಯರು ಸಾಹಿತ್ಯಜ್ಞರಾದ ಹಜ್‌ರತ್ ಇಮಾಮ್ ಹಸ್ಸನ್ ರವರ ಪುತ್ರಿಯಾಗಿದ್ದರು. ತನ್ನ ವಿದ್ಯೆ ಪಾಂಡಿತ್ಯದಿಂದಾಗಿ ಬಾಬರ್ ಲಖಬ್ ಎಂದು ಪ್ರಸಿದ್ಧಿ ಪಡೆದಿದ್ದರು. ಹಾಗೆ ಇಮಾಮ್ ಬಾಬರ್(ರಹ) ಅವರು ಈ ಹದೀಸಿನ ವರದಿಗಾರರಾಗಿದ್ದಾರೆ. ಅವರೇನು ಸಾಧಾರಣ ವ್ಯಕ್ತಿ ಆಗಿರಲಿಲ್ಲ. ಬದಲು ಅವರ ತಂದೆ ತಾಯಿ ಇಬ್ಬರ ಸಂಭಂದವು ಹಝ್ರತ್ ರಸೂಲುಲಾಹ್(ಸ) ರಿಂದ ಜೋಡಿಸಲ್ಪಟ್ಟಿದೆ. ಅವರ ತಾಯಿ ಹಝ್ರತ್ ರಸೂಲುಲ್ಲಾಹ್(ಸ) ರವರ ಮೊಮ್ಮಗನಾದ ಹಝ್ರತ್ ಹಸನ್ ಅವರ ಪುತ್ರಿ ಮತ್ತು ಅವರ ತಂದೆ ಹಝ್ರತ್ ರಸೂಲುಲ್ಲಾಹ್(ಸ) ರವರ ಮೊಮ್ಮಗನಾದ ಹಝ್ರತ್ ಹುಸೇನ್‌ರವರ ಪುತ್ರರಾಗಿದ್ದಾರೆ. ಹೀಗಿರುವಾಗ ಈ ಹದೀಸು ದುರ್ಬಲ ಎಂದಾದರೆ ಹಝ್ರತ್ ಇಮಾಮ್ ಬಾಬರ್(ರಹ) ಸುಳ್ಳು ವರದಿ (ನವೂಝುಬಿಲ್ಲಾಹ್) ಮಾಡಿದ್ದಾರೆಯೇ, ಈ ಕೆಳಗೆ ನಾವು ಮೇಲ್ಕಾಣಿಸಿದ ಪಂಥಾಹ್ವಾನದ ಬಗ್ಗೆ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ವೈಭವಯುತ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ.

**ಮತಾಂಧ ಮೌಲ್ವಿಗಳು ಹೇಳಿದರು. ಈ ಹದೀಸು ಸರಿ ಅಲ್ಲ, ಅವರ ಬಳಿ ಸುಳ್ಳಾಗಿಸುವ ಹೊರತು ಯಾವ ಪುರಾವೆಯೂ ಇಲ್ಲ. ಆದ್ದರಿಂದ ಅವಿಶ್ವಾಸ, ಗೊಂದಲಕಾರಿಗಳ ಹೊರತು ಯಾರೂ ಸಹ ನಿರಾಕರಿಸಲಾರರು ಮತ್ತು ದುಷ್ಕರ್ಮಿಗಳ ಹೊರತು ಯಾರೂ ಸುಳ್ಳಾಗಿಸಲಾರರು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಹಾಗೆ ಈ ಹದೀಸು ಅಲ್ಲಾಹನ ಪ್ರವಾದಿ ಖೈರುಲ್ ಮುರ್ ಸಲೀನ್(ಸ) ರವರದ್ದಾಗಿದ್ದಲ್ಲಿ ಯಾವ ಸಂಶಯವೂ ಇಲ್ಲ. ಈ ಹದೀಸಿನ ಪೈಕಿ ಅದು ಸರಿಯಾದುದಕ್ಕೆ ಹಲವು ಸಾಕ್ಷ್ಯಗಳಿವೆ. ಖುರ್‌ಆನ್ ಸಹ ಅದನ್ನು ದೃಢೀಕರಿಸಿದೆ. ಆದ್ದರಿಂದ ಅವಿಶ್ವಾಸಿ, ಗೊಂದಲಕಾರಿಗಳ ಹೊರತು ಯಾರೂ ಅದನ್ನು ನಿರಾಕರಿಸಲಾರರು. ಮತ್ತು ದುಷ್ಕರ್ಮಿಗಳ ಹೊರತು ಯಾರೂ ಸಹ ಅದನ್ನು ಸುಳ್ಳಾಗಿಸಲಾರರು. ಅಂಥ ನಿರಾಕರಣಧಾರರು ಮತ್ತು ಅಂಥ ಮೌಲ್ವಿಗಳು ಹೇಳುತ್ತಾರೆ. ಈ ಹದೀಸು ಸರಿಯಾದುದಲ್ಲ ಎಂದು, ಬದಲು ಅದು ಒಬ್ಬ ಸುಳ್ಳುಗಾರ ನಾಚಿಕೆಗೇಡಿನ ನುಡಿ ಆಗಿದೆ ಎಂದು. ಮೌಲ್ವಿಗಳ ಬಳಿ ಆ ಸುಳ್ಳಿನ ಕುರಿತು ಯಾವ ಪುರಾವೆಯೂ ಇಲ್ಲ. ಬಹು ದೊಡ್ಡ ಮಾತು ಅವರ ನಾಲಿಗೆಯಿಂದ ಹೊರಡುತ್ತಿದೆ. ಅಪ್ಪಟ ಸುಳ್ಳನ್ನು ಹೇಳುತ್ತಿದ್ದಾರೆ. ಅವರು ಈ ಹದೀಸನ್ನು ಸುಳ್ಳಾಗಿಸಿದರು. ಅದರ ಸತ್ಯತೆ ಅಲ್ಲಾಹನು ಜಾಹೀರುಪಡಿಸಿದೆ. ಈ ಹದೀಸು ಮನುಷ್ಯನ ರಚನೆ ಎನ್ನಲು ಸಾಧ್ಯವಿಲ್ಲ. ಆದರೆ ಅವರು ದೃಷ್ಟಿಹೀನರಾಗುತ್ತಿದ್ದಾರೆ. ಅವರ ಹೃದಯಗಳ ಮೇಲೆ ಮುದ್ರೆ ಹಾಕಲ್ಪಟ್ಟಿದೆ. ಅವರ ಮೇಲೆ ವಿಷಾದವಿದೆ. ಏಕೆ ಅವರು ಧಿಕ್ಕಾರಿಯಾಗಿ ಸತ್ಯವನ್ನು ನಿರಾಕರಿಸುತ್ತಿದ್ದಾರೆ. ಏಕೆ ಅಂತ್ಯ ತೀರ್ಮಾನ ದಿನದ ಅವರಿಗೆ ಭಯವಿಲ್ಲ? ಏಕೆ ಅವರು ಯೋಚಿಸುತ್ತಿಲ್ಲ? ಈ ಹದೀಸಿನ ಸತ್ಯ ಪ್ರಕಟವಾಗಿದೆ. ಅಲ್ಲಾಹನು ಸುಳ್ಳುಗಾರರ ಮಾತಿಗೆ ಯಾವತ್ತೂ ಬೆಂಬಲಿಸುವುದಿಲ್ಲ. ಅಲ್ಲಾಹನು ಸುಳ್ಳುಗಾರರಿಗೆ ಸತ್ಯದ ಶತ್ರುಗಳಾಗಿದ್ದವರಿಗೆ ತನ್ನ ಜ್ಞಾನದಿಂದ ಪಾಲು ನೀಡುವುದಿಲ್ಲ. ಈ ಬಗ್ಗೆ ಏನೆಲ್ಲ ಖುರ್‌ಆನ್‌ನಲ್ಲಿದೆ. ಅದು ನಿನಗೆ ತಿಳಿದಿದೆ. ಆದರೂ ಏಕೆ ನಿರಾಕರಿಸುತ್ತೀರಿ? ಅದಾಗ್ಯೂ ಭವಿಷ್ಯವಾಣಿ ಪೂರ್ಣಗೊಂಡು ತನ್ನ ಸತ್ಯವನ್ನು ಸ್ಪಷ್ಟಪಡಿಸಿದೆ. ಏಕೆಂದರೆ ಆ ಹದೀಸ್ ಸಾದಿಖ್ ಅಮೀನ್ ರಸೂಲರ ಹದೀಸಾಗಿದೆ. ಇಮಾಮ್ ಮುಹಮ್ಮದ್ ಬಾಬರರು

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಮುಹಮ್ಮದ್ ನಬಿ(ಸ)ರ ಕಡೆಯಿಂದ ಮುಸೈಲಿಮ ಕದ್ದಾಬ್‌ನಿಗೆ, ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನು ತನ್ನ ದಾಸರಲ್ಲಿ ತಾನು ಬಯಸಿದ ಜನರನ್ನು ಅದರ ವಾರಸುದಾರರನ್ನಾಗಿ ಮಾಡುವನು. ಉತ್ತಮ ಅಂತ್ಯ ಮುತ್ತಖಿಗಳಾದ ಜನರದ್ದೇ ಆಗಿರುವುದು. ಸನ್ಮಾರ್ಗವನ್ನು ಅನುಸರಿಸುವವರ ಮೇಲೆ ಸಮಾಧಾನವಿರಲಿ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಮುಸೈಲಮ ಕಝ್ಝಾಬ್‌ನ ವಿರುದ್ಧ ನಡೆದ ಯಮಾಮ ಯುದ್ಧದ ಪರಿಸ್ಥಿತಿ ಮತ್ತು ಘಟನೆಯ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20-05-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಹಝ್ರತ್ ಅಬೂಬಕರ್(ರ)ರ ಕಾಲಘಟ್ಟದ ಯಮಾಮ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಯಮಾಮ ಯುದ್ಧದ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಯಮಾಮ ಎಂಬುದು ಯಮನಿನ ಒಂದು ಪ್ರಸಿದ್ಧ ಪಟ್ಟಣವಾಗಿದೆ. ಈಗ ಇದು ಸೌದಿ ಅರೇಬಿಯದಲ್ಲಿದೆ. (ಫ಼ರ್ಹಂಗ್ ಸೀರತ್, ಸಯ್ಯದ್ ಫಝ್ಲುರ್ರಹ್ಮಾನ್, ಪುಟ-321, ಝುವಾರ ಅಕಾಡಮಿ ಪಬ್ಲಿಕೇಷನ್ಸ್ ಕರಾಚಿ 2013) (ಉರ್ದು ದಾಎರ ಮಆರಿಫ್ ಇಸ್ಲಾಮಿಯ, ಸಂಪುಟ-23, ಪುಟ-311, ದಾನಿಷ್‌ಗಾಹ್ ಪಂಜಾಬ್ ಲಾಹೋರ್ 2002)

ಯಮಾಮ ಒಂದು ಅತ್ಯಂತ ಹಚ್ಚಹಸುರು ಮತ್ತು ಕೃಷಿಯೋಗ್ಯ ಪ್ರದೇಶವಾಗಿತ್ತು. ಯಮಾಮ ಅತ್ಯಂತ ಸುಂದರವಾದ ಪಟ್ಟಣಗಳಲ್ಲಿ ಒಂದು ಪಟ್ಟಣವಾಗಿತ್ತು. ಅದರಲ್ಲಿ ಗೋಡಂಬಿ ಮತ್ತು ಖರ್ಜೂರದ ಮರಗಳು ಬಹಳಷ್ಟು ಇತ್ತು. (ಮುಜಮುಲ್ ಬಲದಾನ್, ಸಂಪುಟ-5, ಪುಟ-506, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಯಮಾಮದಲ್ಲಿ ಬನೂ ಹನೀಫ ನೆಲೆಸಿದ್ದರು. ಅದು ಬಹಳ ಯುದ್ಧಪ್ರಿಯ ಸಮುದಾಯವಾಗಿತ್ತು. **"ಸತದ್‌ಊನ ಇಲಾ ಖೌಮಿನ್ ಉಲಿ ಬಅ್‌ಸಿನ್ ಶದೀದಿನ್ ತುಖಾತಿಲೂನಹುಂ ಅಔ ಯುಸ್‌ಲಿಮೂನ್"** ಎಂದರೆ, "ಮಹಾ ಪರಾಕ್ರಮಶಾಲಿಗಳಾದ ಒಂದು ಜನಾಂಗದವರ ವಿರುದ್ಧ ನಿಮ್ಮನ್ನು ಕರೆಯಲಾಗುವುದು. ನೀವು ಅವರೊಡನೆ ಯುದ್ಧ ಮಾಡುವಿರಿ ಅಥವಾ ಅವರು ಮುಸ್ಲಿಮರಾಗುವರು." ಈ ವಚನವನ್ನು ವ್ಯಾಖ್ಯಾನಿಸುತ್ತಾ ತಫ್ಸೀರ್ ಖುರ್‌ತುಬಿಯಲ್ಲಿ ಹೀಗೆ ಬರೆಯಲಾಗಿದೆ: ಮಹಾ ಪರಾಕ್ರಮಿಶಾಲಿ ಎಂಬುದರಿಂದ ಇಲ್ಲಿ ಇರಾನ್ ಮತ್ತು ರೋಮಿನ ಸಮುದಾಯವನ್ನು ಉದ್ದೇಶಿಸಲಾಗಿದೆ ಎಂದು ಹಸನ್ ಹೇಳುತ್ತಾರೆ. ಇಲ್ಲಿ ಹವಾಝಿನ್ ಮತ್ತು ಸಖೀಫಿನ ಗೋತ್ರಗಳನ್ನು ಉದ್ದೇಶಿಸಲಾಗಿದೆ ಎಂದು ಇಬ್ನು ಜುಬೈರ್ ಹೇಳುತ್ತಾರೆ. ಯಮಾಮದಲ್ಲಿ ಇರುವ ಬನೂ ಹನೀಫ ಮತ್ತು ಮುಸೈಲಿಮರ ಜೊತೆಗಾರರನ್ನು ಉದ್ದೇಶಿಸಲಾಗಿದೆ ಎಂದು ಝೊಹ್‌ರಿ ಮತ್ತು ಮಖಾತಿಲ್ ಹೇಳುತ್ತಾರೆ. ನಾವು ಈ ವಚನವನ್ನು ಓದುತ್ತಿದ್ದೆವು. ಆದರೆ ಆ ಮಹಾಪರಾಕ್ರಮಿಶಾಲಿ ಕೋಮು ಯಾವುದೆಂದು ನಮಗೆ ಗೊತ್ತಿರಲಿಲ್ಲ. ಕೊನೆಗೆ ಹಝ್ರತ್ ಅಬೂಬಕರ್(ರ) ಬನೂ ಹನೀಫರ ವಿರುದ್ಧ ಯುದ್ಧ ಮಾಡಲು ನಮ್ಮನ್ನು ಕರೆದಾಗ, ಅದು ಇದಾಗಿತ್ತು ಎಂದು ನಮಗೆ ಗೊತ್ತಾಯಿತು ಎಂದು ರಾಫೀ ಬಿನ್ ಖ಼ತೀಜ್ ಹೇಳುತ್ತಾರೆ.
(ಅಲ್ಜಾಮಿ ಉಲ್ ಅಹ್ಕಾಮ್ ಅಲ್‌ಖುರ್‌ಆನ್, ಅಲ್ಲಾಮ ಖುರ್‌ತಬಿ, ಪುಟ-2850-2851, ದಾರ್ ಇಬ್ನೆ ಹಝುಮ್)

ಹಝ್ರತ್ ಪೈಗಂಬರ್(ಸ) ಆರನೇ ಅಥವಾ ಏಳನೇ ಹಿಜರಿಯ ಆರಂಭದಲ್ಲಿ ವಿವಿಧ ಅರಸರಿಗೆ ತಬ್ಲೀಗ್ ಪರವಾದ ಪತ್ರಗಳನ್ನು ಬರೆದಾಗ ಒಂದು ಪತ್ರವನ್ನು ಅರಸನಾದ ಹೌಝ಼ು ಬಿನ್ ಅಲಿ ಮತ್ತು ಯಮಾಮ ನಿವಾಸಿಗಳ ಹೆಸರಲ್ಲೂ ಬರೆದಿದ್ದರು. ಅದರಲ್ಲಿ ಅವನನ್ನು ಮತ್ತು ಯಮಾಮ ನಿವಾಸಿಗಳನ್ನು ಇಸ್ಲಾಮಿಗೆ ಕಡೆಗೆ ಆಮಂತ್ರಿಸಲಾಗಿತ್ತು. ಹಿಜರೀ 9ರಲ್ಲಿ ಅನೇಕ ಸಂಘಗಳು ಮದೀನಕ್ಕೆ ಬಂದಾಗ ಯಮಾಮದಿಂದ ಬನೂ ಹನೀಫದ ಸಂಘವು ಬಂತು. ಆ ಸಂಘದಲ್ಲಿ ಮುಜಾಅ ಬಿನ್ ಮುರಾರ ಕೂಡ ಇದ್ದರು. ಅವನು ವಿನಂತಿಸಿದಾಗ ಅವನಿಗೆ ಹಝ್ರತ್ ಪೈಗಂಬರ್(ಸ) ಜನವಸತಿಯಿಲ್ಲದ ಭೂಸ್ವತ್ತುಗಳಿಂದ ಒಂದನ್ನು ಕೊಟ್ಟಿದ್ದರು. ಆ ಸಂಘದಲ್ಲಿ ರಿಜಾಲ್ ಬಿನ್ ಅನ್‌ಫೂಹ್ ಕೂಡ ಇದ್ದರು. ಅಲ್ಲದೆ ಮುಸೈಲಿಮ ಕದ್ದಾಬ್ ಸಮಾಮ ಬಿನ್ ಕಬೀರ್ ಬಿನ್ ಹಬೀಬ್ ಕೂಡ ಇದ್ದರು. ಅವನ ಹೆಸರು ಮುಸೈಲಿಮ ಬಿನ್ ಸಮಾಮ ಆಗಿತ್ತು ಮತ್ತು ಅವನ ಉಪನಾಮ ಅಬೂಸಮಾಮ ಆಗಿತ್ತು ಎಂದು ಇಬ್ನು ಹಿಶಾಂ ಹೇಳುತ್ತಾರೆ. ಬನೂ ಹನೀಫರ ಈ ಸಂಘ ಅನ್ಸಾರೀ ಸ್ತ್ರೀಯಾದ ರಮ್ಲ ಬಿನ್ ಹಾರಿಸಳ ಮನೆಯಲ್ಲಿ ತಂಗಿತ್ತು. (ಫ಼ತೂಹ್ ಅಲ್‌ಬಲದಾನ್ ಅಲ್‌ಇಮಾಮ್ ಅಬಿಲ್‌ಹಸನ್ ಅಹ್ಮದ್ ಬಿನ್ ಅಲ್‌ಬಲಾಝುರಿ, ಪುಟ-59, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ-852, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಪೈಗಮ್‌ಬರ್(ಸ) ಅವರ ಬೈಅತ್ ಮಾಡುಲು ಅನೇಕ ಗುಂಪುಗಳು ಸತತವಾಗಿ ಆಗಮಿಸುತ್ತಿದ್ದರಿಂದ ಪ್ರವಾದಿ(ಸ) ರವರು ಆ ತಂಡಗಳನ್ನು ತಂಗಲು ಒಂದು ಮನೆಯನ್ನು ನಿಶ್ಚಯಿಸಿದ್ದರು. ಈ ಮನೆ ರಮ್ಲ ಬಿನ್ ಹಾರಿಸಳದ್ದಾಗಿತ್ತು. ಅವಳು ಬನೂ ನಜಾರಿನ ಒಬ್ಬ ಮಹಿಳೆಯಾಗಿದ್ದಳು. ಇದು ಬಹಳ ದೊಡ್ಡದಾದ ಮನೆಯಾಗಿತ್ತು.
(ಅಲ್‌ಮುಫಸ್ಸಿಲ್ ಫಿ ತ್ತಾರೀಖಿಲ್ ಅರಬ್ ಖಬ್ಲುಲ್ ಇಸ್ಲಾಮ್, ಜವಾದ್ ಅಲಿ, ಭಾಗ-5, ಪುಟ-258, ಜರೀರ್ 2006)

ಬನೂ ಹನೀಫರ ಜನರು ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಹೋದಾಗ ಅವರು ಮುಸೈಲಿಮರನ್ನು ತಮ್ಮ ಜೊತೆಗೆ ಕೊಂಡು ಹೋಗಿರಲಿಲ್ಲ. ಅವನನ್ನು ಅವರ ಸಾಮಾನುಗಳ ಸಂರಕ್ಷಣೆಗಾಗಿ ಅಲ್ಲೇ ಬಿಟ್ಟುಬಂದಿದ್ದರು. ಅವರೆಲ್ಲರೂ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದಾಗ ಅವರು ಮುಸೈಲಿಮರ ಕುರಿತು ಪ್ರಸ್ತಾಪಿಸಿದರು. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾವು ನಮ್ಮೊಬ್ಬ ಜೊತೆಗಾರನನ್ನು ಸಾಮಾನುಗಳ ಮತ್ತು ಸವಾರಿಮೃಗಗಳ ಕಾವಲಿಗಾಗಿ ಹಿಂದೆ ಬಿಟ್ಟು ಬಂದಿದ್ದೇವೆ. ಅವನು ನಮಗಾಗಿ ನಮ್ಮ ಸಾಮಾನುಗಳ ಸಂರಕ್ಷಣೆ ಮಾಡುತ್ತಿದ್ದಾನೆ. ಆಗ ಹಝ್ರತ್ ಪೈಗಂಬರ್(ಸ) ಮುಸೈಲಿಮನಗಾಗಿಯೂ ಇತರರಿಗೆ ನೀಡಿದಷ್ಟೇ ಕೊಡುಗೆಗಳನ್ನು ನೀಡಲು ನಿರ್ದೇಶಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅವನು ಪದವಿಯಲ್ಲಿ ನಿಮಗಿಂತ ಕಡಿಮೆಯೇನೂ ಅಲ್ಲ. ಏಕೆಂದರೆ ಅವನು ತನ್ನ ಜೊತೆಗಾರರ ಸಾಧನಸಾಮಗ್ರಿಗಳ ಸಂರಕ್ಷಣೆ ಮಾಡುತ್ತಿದ್ದಾನೆ. ಅನಂತರ ಆ ಸಂಘ ಹಝ್ರತ್ ಪೈಗಂಬರ್(ಸ)ರ ಬಳಿಯಿಂದ ಹೊರಟು ಹೋಯಿತು. ಮುಸೈಲಿಮನಿಗಾಗಿ ಹಝ್ರತ್ ಪೈಗಂಬರ್(ಸ) ಕೊಟ್ಟದ್ದನ್ನು ಕೂಡ ತೆಗೆದುಕೊಂಡು ಹೋದರು. (ಅಸ್ಸೀರತುನ್ನಬನಯ ಲಿಇಬ್ನೆ ಹಿಶ್ಯಾಮ್, ಪುಟ-852, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಮುಸೈಲಿಮ ಹೊರತು ಬನೂ ಹನೀಫರ ಸಂಘದಿಂದ ಎಲ್ಲರ ಭೇಟಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಆಗಿತ್ತು ಎಂದು ಈ ವರದಿಯಿಂದ ತಿಳಿದುಬರುತ್ತದೆ. ಆದರೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಮುಸೈಲಿಮರ ಭೇಟಿಯ ಬಗ್ಗೆಯೂ ಕೆಲವು ವರದಿಗಳು ಇವೆ. ಎರಡನೇ ಬಾರಿ ಹೋದಾಗ ಭೇಟಿಯಾಗಿರಬಹುದು ಎಂದೂ ಹೇಳಲಾಗುತ್ತದೆ. ಹೇಗಿದ್ದರೂ ಇದರ ವಿವರಣೆಯಲ್ಲಿ ಹೀಗೆಯೂ ಬರೆಯಲಾಗಿದೆ: ಈ ಸಂಘ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದಾಗ ಅದರಲ್ಲಿ ಮುಸೈಲಿಮ ಕೂಡ ಇದ್ದನು. ಅವನನ್ನು ಬಟ್ಟೆಗಳಿಂದ ಹೊದಿಸಲಾದ ಸ್ಥಿತಿಯಲ್ಲಿ ಅವನನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ

ತರಲಾಗಿತ್ತು. ಹಝ್ರತ್ ಪೈಗಂಬರ್(ಸ) ಸಹಾಬಿಯರ ನಡುವೆ ಕುಳಿತುಕೊಂಡಿದ್ದರು. ಅವರ ಕೈಯಲ್ಲಿ ಖರ್ಜೂರದ ಒಂದು ರೆಂಬೆಯಿತ್ತು. ಮುಸೈಲಿಮ ಹಝ್ರತ್ ಪೈಗಂಬರ್(ಸ)ರೊಡನೆ ಮಾತುಕತೆ ನಡೆಸಿದನು ಮತ್ತು ಕೆಲವು ಬೇಡಿಕೆಗಳನ್ನು ಇರಿಸಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನನ್ನೊಡನೆ ನನ್ನ ಕೈಯಲ್ಲಿರುವ ಈ ಖರ್ಜೂರದ ಕೊಂಬೆಯನ್ನು ಬೇಡಿದರೂ ಅದನ್ನೂ ಕೂಡ ಕೊಡುವುದಿಲ್ಲ.
(ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ-6, ಪುಟ-326, ದಾರುಲ್ ಕುತುಬ್ ಇಲ್‌ಮಿಯ 1993)

ಸಹೀಹ್ ಬುಖ್ಖಾರಿಯಲ್ಲಿ ಇರುವ ವರದಿ ಪ್ರಕಾರ ಮುಸೈಲಿಮ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಹೋಗಿರಲಿಲ್ಲ. ಬದಲಾಗಿ ಹಝ್ರತ್ ಪೈಗಂಬರ್(ಸ) ಸ್ವತಃ ಅವನ ಬಳಿಗೆ ಹೋಗಿದ್ದರು. ಉಬೈದುಲ್ಲಾಹ್ ಬಿನ್ ಅಬ್ದುಲ್ಲಾಹ್ ಬಿನ್ ಉತ್ಬ ಹೇಳುತ್ತಾರೆ: ಮುಸೈಲಿಮ ಬಿನ್ ಕದ್ದಾಬ್ ಮದೀನಕ್ಕೆ ಬಂದದ್ದಾಗಿ ನಮಗೆ ಮಾಹಿತಿ ಲಭಿಸಿತ್ತು. ಹಾರಿಸಿನ ಮಗಳ ಮನೆಗೆ ಹೋದನು. ಹಾರಿಸ್ ಬಿನ್ ಕುರೈಝಿನ ಮಗಳು ಅವನ ಪತ್ನಿಯಾಗಿದ್ದಳು. ಅವಳು ಅಬ್ದುಲ್ಲಾಹ್ ಬಿನ್ ಆಮಿರಿನ ತಾಯಿಯಾಗಿದ್ದಳು. ಹಝ್ರತ್ ಪೈಗಂಬರ್(ಸ) ಅವನ ಬಳಿಗೆ ಹೋದರು. ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹಝ್ರತ್ ಸಾಬಿತ್ ಬಿನ್ ಖೈಸ್ ಬಿನ್ ಸಮಾಸ್ ಇದ್ದರು. ಹಝ್ರತ್ ಪೈಗಂಬರ್(ಸ)ರ ಬಳಿ ಒಂದು ಬೆತ್ತವಿತ್ತು. ಅವರು ಮುಸೈಲಿಮರ ಬಳಿ ನಿಂತು ಅವನೊಡನೆ ಮಾತುಕತೆ ನಡೆಸಿದರು. ಮುಸೈಲಿಮ ಹೇಳಿದನು: ನುಬುವ್ವತ್ತಿನ ಬಗ್ಗೆ ತೀರ್ಮಾನವಾಗಬೇಕು. ಅದು ನಿಮ್ಮ ನಂತರ ನಮಗೆ ಸಿಗಬೇಕು. ಇದೇ ಆಗಿತ್ತು ಅವನ ಬೇಡಿಕೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನನ್ನೊಡನೆ ಈ ಬೆತ್ತ ಕೇಳಿದರೂ ನಾನು ನಿನಗೆ ಅದನ್ನು ಕೊಡುವುದಿಲ್ಲ. ನೀನು ನಾನು ಕನಸಿನಲ್ಲಿ ಕಂಡ ಅದೇ ವ್ಯಕ್ತಿಯಾಗಿರುವಿ ಎಂದು ನಾನು ಭಾವಿಸುತ್ತೇನೆ. ಸಾಬಿತ್ ಬಿನ್ ಖೈಸ್ ನನ್ನ ಪರವಾಗಿ ನಿನಗೆ ಉತ್ತರ ನೀಡುವರು. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟು ಹೋದರು. (ಸಹೀಹ್ ಬುಖಾರಿ, ಕಿತಾಬುಲದ ಮಗ್ಹಾಝಿ, ವರದಿ ಸಂಖ್ಯೆ-4378)

ಅದೇ ರೀತಿಯಲ್ಲಿ ಮತ್ತೊಂದು ವರದಿಯಿದೆ. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಮುಸೈಲಿಮ ಬಿನ್ ಕದ್ದಾಬ್ ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಬಂದನು. ಅವನು ಹೇಳಿದನು: ಹಝ್ರತ್ ಪೈಗಂಬರ್(ಸ) ನನ್ನನ್ನು ಅವರ ನಂತರ ಉತ್ತರಾಧಿಕಾರಿಯನ್ನಾಗಿ ಮಾಡಿದರೆ, ನಾನು ಅವರನ್ನು ಅನುಸರಿಸುವೆನು. ಅವನು ತನ್ನ ಸಮುದಾಯದ ಅನೇಕ ಜನರ ಜೊತೆಗೆ ಬಂದಿದ್ದನು. ಅನಂತರ ಹಝ್ರತ್ ಪೈಗಂಬರ್(ಸ) ಅವನ ಬಳಿಗೆ ಹೋದರು. ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹಝ್ರತ್ ಖೈಸ್ ಬಿನ್ ಸಾಬಿತ್ ಬಿನ್ ಶುಮಾಸ್ ಇದ್ದರು. ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಖರ್ಜೂರದ ಒಂದು ಬೆತ್ತವಿತ್ತು. ತನ್ನ ಸಂಗಡಿಗರೊಡನೆ ಇದ್ದ ಮುಸೈಲಿಮನ ಮುಂದೆ ಹಝ್ರತ್ ಪೈಗಂಬರ್(ಸ) ನಿಂತರು. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನಿಂದ ನೀನು ಈ ಬೆತ್ತವನ್ನು ಬೇಡಿದರೂ ನಾನು ಕೊಡುವುದಿಲ್ಲ. ನಿನಗೆ ಖಂಡಿತ ಅಲ್ಲಾಹನ ತೀರ್ಮಾನಕ್ಕಿಂತ ಮುಂದೆ ಹೋಗಲು ಸಾಧ್ಯವಲ್ಲ. ನೀನು ಬೆನ್ನು ತಿರುಗಿಸಿದರೆ ಅಲ್ಲಾಹನು ನಿನ್ನನ್ನು ಬೇರುಸಹಿತ ಕಿತ್ತು ಹಾಕುವನು. ನೀನು ನಾನು ಕನಸಿನಲ್ಲಿ ಕಂಡ ಅದೇ ವ್ಯಕ್ತಿಯಾಗಿರುವೆ ಎಂದು ನಾನು ಭಾವಿಸುತ್ತೇನೆ. ನಿನ್ನ ಬಗ್ಗೆ ಅನೇಕ ಸಂಗತಿಗಳನ್ನು ನನಗೆ ಕನಸಿನಲ್ಲಿ ತೋರಿಸಲಾಗಿತ್ತು. ಸಾಬಿತ್ ಬಿನ್ ಖೈಸ್ ನಿನಗೆ ನನ್ನ ಪರವಾಗಿ ಉತ್ತರ ನೀಡುವರು. ಅನಂತರ ಹಝ್ರತ್ ಪೈಗಂಬರ್(ಸ) ಅವನ ಬಳಿಯಿಂದ ಹೊರಟು ಹೋದರು. ಇದು ಬುಖ್ಖಾರಿಯ ವರದಿಯಾಗಿದೆ.
(ಸಹೀಹ್ ಬುಖಾರಿ, ಕಿತಾಬುಲ್ ಮಗ್ಹಾಝಿ, ವರದಿ ಸಂಖ್ಯೆ-4373)

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಈ ಕನಸಿನ ಬಗ್ಗೆ ನಾನು ಕೇಳಿದೆ. ಹಝ್ರತ್ ಅಬೂ ಹುರೈರ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಈ ಕನಸಿನ ಬಗ್ಗೆ ಹೀಗೆ ಹೇಳಿದ್ದರು: ಒಮ್ಮೆ ನಾನು ನಿದ್ದೆ ಮಾಡುತ್ತಿದ್ದೆ. ಆಗ ನಾನು ನನ್ನ ಕೈಯಲ್ಲಿ ಚಿನ್ನದ ಎರಡು ಬಳೆಗಳನ್ನು ಕಂಡೆ. ಆ ಅವಸ್ಥೆಯಿಂದ ನಾನು ಚಿಂತಿತನಾದೆ. ಅವುಗಳ ಮೇಲೆ ಊದಲು ನನ್ನೊಡನೆ ಕನಸಿನಲ್ಲೇ ದಿವ್ಯವಾಣಿ ಮೂಲಕ ತಿಳಿಸಲಾಯಿತು. ಆಗ ನಾನು ಅವುಗಳ ಮೇಲೆ ಊದಿದೆ. ಆಗ ಅವು ಹಾರಿಹೋಯಿತು. ನನ್ನ ನಂತರ ಬರಲಿರುವ ಎರಡು ಸುಳ್ಳು ಪ್ರವಾದಿಗಳ ಬಗ್ಗೆ ಇಲ್ಲಿ ಹೇಳಲಾಗಿದೆ ಎಂದು ನಾನು ಅದನ್ನು ವ್ಯಾಖ್ಯಾನಿಸಿದೆ. ವರದಿಗಾರರಾದ ಉಬೈದುಲ್ಲಾಹ್ ಹೇಳುತ್ತಾರೆ: ಅವರಲ್ಲಿ ಒಬ್ಬ ಅನ್ಸಿ ಆಗಿರುವನು. ಅವನನ್ನು ಫಿರೋಝ್ ಯಮನಿನಲ್ಲಿ ಕೊಂದು ಹಾಕಿದನು. ಮತ್ತೊಬ್ಬ ಮುಸೈಲಿಮ ಬಿನ್ ಕದ್ದಾಬ್. ಇದು ಕೂಡ ಬುಖ್ಖಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಹಾಝಿ, ವರದಿ ಸಂಖ್ಯೆ-4374) (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ, ವರದಿ ಸಂಖ್ಯೆ-4379)

ಹೇಗಿದ್ದರೂ ಮೇಲಿನ ವರದಿಗಳಿಂದ ಗೊತ್ತಾಗುವುದೇನೆಂದರೆ, ಮುಸೈಲಿಮ ಬಿನ್ ಕದ್ದಾಬ್ ಒಂದಕ್ಕಿಂತ ಹೆಚ್ಚಿನ ಬಾರಿ ಮದೀನಕ್ಕೆ ಬಂದಿದ್ದನು. ಮೊದಲನೆ ಬಾರಿ ಬಂದಾಗ ಅವನ ಸಂಘ ಅವನನ್ನು ಸಾಮಾನುಗಳ ಸಂರಕ್ಷಣೆಗಾಗಿ ಹಿಂದೆ ಬಿಟ್ಟು ಬಂದಿದ್ದರು. ಅವನ ಭೇಟಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಆಗ ಆಗಿರಲಿಲ್ಲ. ಎರಡನೇ ಬಾರಿ ಬಂದಾಗ ಅವನ ಭೇಟಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಆಗಿತ್ತು. ಆಗ ಅವನು ಹಝ್ರತ್ ಪೈಗಂಬರ್(ಸ)ರ ಉತ್ತರಾಧಿಕಾರಿಯನ್ನಾಗಿ ಅವನನ್ನು ಮಾಡಲು ಬೇಡಿಕೆ ಇರಿಸಿದ್ದನು. ಈ ಸಂಬಂಧವಾಗಿ ಸಹೀಹ್ ಬುಖ್ಖಾರಿಯ ವ್ಯಾಖ್ಯಾನ ಗ್ರಂಥವಾದ ಫತಹುಲ್ ಬಾರಿಯಲ್ಲಿ ಹೀಗೆ ಬರೆಯಲಾಗಿದೆ: ಮುಸೈಲಿಮ ಎರಡು ಬಾರಿ ಮದೀನಕ್ಕೆ ಬಂದಿರಬಹುದು. ಮೊದಲ ಬಾರಿ ಬಂದಾಗ ಬನೂ ಹನೀಫರ ಸರದಾರ ಅವನಲ್ಲದೇ ಬೇರೆ ಯಾರೋ ಆಗಿದ್ದರು. ಎಂದರೆ ಆಗ ಆ ಗೋತ್ರದ ಸರದಾರ ಅವನಾಗಿರಲಿಲ್ಲ. ಆದ್ದರಿಂದಲೇ ಅವನನ್ನು ಸಾಮಾನುಗಳ ಸಂರಕ್ಷಣೆಗಾಗಿ ಹಿಂದೆ ಇರಿಸಲಾಗಿತ್ತು. ಎರಡನೇ ಬಾರಿ ಬಂದಾಗ ಜನರು ಅವನಿಗೆ ವಿಧೇಯರಾಗಿದ್ದರು. ಆಗ ಹಝ್ರತ್ ಪೈಗಂಬರ್(ಸ) ಅವನ ಜೊತೆಗೆ ಮಾತುಕತೆ ನಡೆಸಿದ್ದರು. ಒಂದೇ ಘಟನೆಯಾಗಿರಲೂ ಬಹುದು. ಅವನು ತನ್ನ ಇಷ್ಟ ಪ್ರಕಾರ, ಹಝ್ರತ್ ಪೈಗಂಬರ್(ಸ)ರ ಸಭೆಯಲ್ಲಿ ಹಾಜರಾಗುವುದಕ್ಕಿಂತ ಸಾಮಾನುಗಳನ್ನು ನೋಡುತ್ತೇನೆ ಎಂದು ಅಹಂಕಾರದಿಂದ ಹಿಂದೆ ಉಳಿದಿರಲೂ ಬಹುದು. ಆದರೆ ಹಝ್ರತ್ ಪೈಗಂಬರ್(ಸ) ತನ್ನ ಅಭ್ಯಾಸದಂತೆ ಅವನೊಡನೆ ಗೌರವದಿಂದ ವರ್ತಿಸಿರಲೂ ಬಹುದು. ಅವನು ಬಹಳಷ್ಟು ಜನರ ಜೊತೆಗೆ ಬಂದಿದ್ದನು ಎಂದೂ ಹದೀಸಿನಲ್ಲಿದೆ. 17 ಜನರೊಂದಿಗೆ ಬಂದಿದ್ದನು ಎಂದೂ ಹದೀಸಿನಲ್ಲಿದೆ. ಮುಸೈಲಿಮ ಒಂದಕ್ಕಿಂತ ಹೆಚ್ಚಿನ ಬಾರಿ ಮದೀನಕ್ಕೆ ಬಂದಿದ್ದನು ಎಂಬುದನ್ನು ಇದು ಸಾಬೀತುಪಡಿಸುತ್ತದೆ. (ಫತಹುಲ್ ಬಾರಿ, ಶರಹ್ ಸಹೀಹ್ ಬುಖಾರಿ ಲಿಇಬ್ನೆ ಹಜರ್, ಸಂಪುಟ-8, ಪುಟ-112, ವರದಿ ಸಂಖ್ಯೆ-4373, ಖದೀಮಿ ಕುತುಬ್ ಖಾನ ಆರಾಮ್ ಬಾಗ್ ಕರಾಚಿ)

ಹೇಗಿದ್ದರೂ ಈ ಸಂಘ ಮರಳಿ ಯಮಾಮಗೆ ತಲುಪಿದಾಗ ಅಲ್ಲಾಹನ ಶತ್ರುವಾದ ಮುಸೈಲಿಮ ಮುರ್ತದ್ ಆದನು. ಅವನು ನುಬುವ್ವತ್ ವಾದ ಮಾಡಿದನು. ನನ್ನನ್ನು ಕೂಡ ಹಝ್ರತ್ ಪೈಗಂಬರ್(ಸ)ರ ನುಬುವ್ವತ್ತಿನೊಂದಿಗೆ ಸಹಭಾಗಿಯನ್ನಾಗಿ ಮಾಡಲಾಗಿದೆ ಎಂದು ಹೇಳಿದನು.

ಅನಂತರ ಅವನು ವಚನಗಳನ್ನು ರಚಿಸಲು ಶುರುಮಾಡಿದನು. ಪವಿತ್ರ ಖುರ್‌ಆನನ್ನು ನಕಲು ಮಾಡುತ್ತಾ ಜನರಿಗಾಗಿ ವಚನಗಳನ್ನು ರಚಿಸಲು ಶುರುಮಾಡಿದನು. ನಮಾಝನ್ನು ಮಾಫ್ ಮಾಡಿದನು. ಎಂದರೆ ನಮಾಝ್ ನಿರ್ವಹಿಸಬೇಕಾಗಿಲ್ಲವೆಂದು ಹೇಳಿದನು. ವ್ಯಭಿಚಾರ ಮತ್ತು ಮದ್ಯಪಾನವನ್ನು ಅನುಮತನೀಯಗೊಳಿಸಿದನು. ಅದರೊಂದಿಗೆ ಹಝ್ರತ್ ಪೈಗಂಬರ್(ಸ) ನಬಿಯಾಗಿರುವರು ಎಂಬುದನ್ನು ಕೂಡ ಸಾಕ್ಷ್ಯವಹಿಸಿದನು. ಬನೂ ಹನೀಫದ ಜನರು ಅವನ ಮಾತನ್ನು ಒಪ್ಪಿದರು. ಒಂದು ಅವನು ಶರೀಅತಿನಲ್ಲಿ ಕೆಲವು ಸೌಲಭ್ಯಗಳನ್ನು ಮಾಡಿದನು. ಅವನ ಮೇಲೂ ಅಲ್ಲಾಹನು ದಿವ್ಯವಾಣಿ ಇಳಿಸಿದನು ಎಂದು ಹೇಳಿದನು. ಮತ್ತೊಂದೆಡೆ ಜನರನ್ನು ಹಝ್ರತ್ ಪೈಗಂಬರ್(ಸ)ರಿಂದ ದೂರ ಕೊಂಡು ಹೋಗಲಾಗುತ್ತಿದೆ ಎಂದು ಜನರಿಗೆ ಅನಿಸದಿರಲು ಹಝ್ರತ್ ಪೈಗಂಬರ್(ಸ) ಕೂಡ ನಬಿಯಾಗಿರುವರು ಎಂಬುದನ್ನು ಒಪ್ಪಿಕೊಂಡನು. ಬಹಳ ಕಾಪಟ್ಯದಿಂದ ಅವನು ಈ ಎಲ್ಲ ಕೆಲಸಗಳನ್ನು ಮಾಡಿದ್ದನು.
(ಸಬ್ಲುಲ್ ಹುದ ವ ರ್‍ರಶ್ಶಾದ್, ಸಂಪುಟ-6, ಪುಟ-326, ದಾರುಲ್ ಕುತುಬ್ ಇಲ್‌ಮಿಯ 1993) (ತಾರೀಖ್ಖ ಅತ್ತಬರಿ, ಸಂಪುಟ-2, ಪುಟ-271, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಯಮಾಮ ನಿವಾಸಿಯಾದ ರಜ್ಜಾಲ್ ಬಿನ್ ಅನ್‌ಫುಅ ಮುಸೈಲಿಮನ ಜೊತೆಗೆ ಸೇರಿದ್ದು ಅವನ ಶಕ್ತಿ ವರ್ಧಿಸಲು ಮತ್ತೊಂದು ಕಾರಣವಾಗಿತ್ತು. ಹಝ್ರತ್ ಪೈಗಂಬರ್(ಸ)ರ ಹಿಜ್ರತಿನ ನಂತರ ರಜ್ಜಾಲ್ ಮದೀನಕ್ಕೆ ಬಂದಿದ್ದನು. ಅಲ್ಲಿ ಅವನು ಪವಿತ್ರ ಖುರ್‌ಆನ್ ಕಲಿತನು ಮತ್ತು ಧಾರ್ಮಿಕ ಶಿಕ್ಷಣವನ್ನು ಗಳಿಸಿದನು. ಮುಸೈಲಿಮ ಧರ್ಮತ್ಯಾಗ ಮಾಡಿದಾಗ ಹಝ್ರತ್ ಪೈಗಂಬರ್(ಸ) ಅವನನ್ನು ಯಮಾಮ ನಿವಾಸಿಗಳ ಕಡೆಗೆ ಬೋಧಕನಾಗಿ ಮತ್ತು ಮುಸೈಲಿಮನನ್ನು ಅನುಸರಿಸುವುದರಿಂದ ಜನರನ್ನು ತಡೆಯಲಿಕ್ಕಾಗಿ ಕಳುಹಿಸಿದ್ದರು. ಆದರೆ ಅದು ಅದಕ್ಕಿಂತ ದೊಡ್ಡದಾದ ಪಿತೂರಿಗೆ ಕಾರಣವಾಯಿತು.

ಮುಸೈಲಿಮನ ಸುಳ್ಳುಪ್ರವಾದಿತ್ವ ವಾದವನ್ನು ಅವನು ಒಪ್ಪಿದನು. ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರ ಜೊತೆಗೆ ನುಬುವ್ವತ್ತಿನಲ್ಲಿ ಮುಸೈಲಿಮ ಕೂಡ ಸಹಭಾಗಿಯಾಗಿರುವವನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಒಂದು ಸುಳ್ಳು ಮಾತನ್ನು ಕೂಡ ಹೇಳಿದನು. ಹಝ್ರತ್ ಪೈಗಂಬರ್(ಸ)ರ ಸಂಗಡಿಗರಲ್ಲಿ ಒಬ್ಬನೂ ಜನರಿಗೆ ಪವಿತ್ರ ಖುರ್ಆನನ್ನು ಕಲಿಸುವವನೂ ಆದ ಒಬ್ಬ ವ್ಯಕ್ತಿಯು ಮುಸೈಲಿಮನ ನುಬುವ್ವತಿಗೆ ಸಾಕ್ಷಿ ಹೇಳುತ್ತಿರುವುದಾಗಿ ಯಮಾಮದ ಜನರು ಕಂಡಾಗ ಅವರಿಗೆ ಮುಸೈಲಿಮನ ನುಬುವ್ವತ್ತನ್ನು ನಿರಾಕರಿಸಲು ಯಾವುದೇ ಎಡೆಯಿರಲಿಲ್ಲ. ಜನರು ಗುಂಪುಗುಂಪಾಗಿ ಮುಸೈಲಿಮನ ಬಳಿಗೆ ಬಂದು ಅವನ ಬೈಅತ್ ಮಾಡಲು ಶುರುಮಾಡಿದರು.

(ಹಝ್ರತ್ ಅಬುಬಕ್ಕರ್‌ಸಿದ್ದೀಖ್(ರ) ಮುಯುಹಮ್ಮದ್ ಹುಸೈನ್ ಹೈಕಲ್(ಅನುವಾದ) ಪುಟ–187–188) (ತಾರೀಖ್ ಇಬ್ನೆ ಖುಲ್ದೂನ್, ಸಂಪುಟ–2, ಪುಟ–437–438, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಪೈಗಂಬರ್(ಸ)ರಿಗೆ ಮುಸೈಲಿಮ ಒಂದು ಪತ್ರವನ್ನು ಕೂಡ ಬರೆದನು. ಅದರಲ್ಲಿ ಹೀಗೆ ಬರೆಯಲಾಗಿತ್ತು: ಅಲ್ಲಾಹನ ಪ್ರವಾದಿ ಮುಸೈಲಿಮನ ಕಡೆಯಿಂದ ರಸೂಲುಲ್ಲಾಹ್(ಸ)ರಿಗೆ, ಅರ್ಧ ಭೂಸ್ವತ್ತು ನಮ್ಮದು ಮತ್ತು ಅರ್ಧ ಖುರೈಶಿಗಳದ್ದು. ಆದರೆ ಖುರೈಶ್ ನ್ಯಾಯಪಾಲನೆ ಮಾಡುತ್ತಿಲ್ಲ.

ಅದಕ್ಕೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) ಅವನಿಗೆ ಹೀಗೆ ಪತ್ರ ಬರೆದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಮುಹಮ್ಮದ್ ನಬಿ(ಸ)ರ ಕಡೆಯಿಂದ ಮುಸೈಲಿಮ ಕದ್ದಾಬ್‌ನಿಗೆ, ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನು ತನ್ನ ದಾಸರಲ್ಲಿ ತಾನು ಬಯಸಿದ ಜನರನ್ನು ಅದರ ವಾರಸುದಾರರನ್ನಾಗಿ ಮಾಡುವನು. ಉತ್ತಮ ಅಂತ್ಯ ಮುತ್ತಖಿಗಳಾದ ಜನರದ್ದೇ ಆಗಿರುವುದು. ಸನ್ಮಾರ್ಗವನ್ನು ಅನುಸರಿಸುವವರ ಮೇಲೆ ಸಮಾಧಾನವಿರಲಿ. (ಫತೂಹುಲ್ ಬಲದಾನ್, ಅಲ್‌ಇಮಾಮ್ ಹಸನ್ ಅಹ್ಮದ್ ಬಿನ್ ಯಹ್ಯಾ ಅಲ್‌ಬಲಾಝುರಿ, ಪುಟ–59–60, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ಹಝ್ರತ್ ಪೈಗಂಬರ್(ಸ)ರ ಈ ಪತ್ರವನ್ನು ಹಬೀಬ್ ಬಿನ್ ಝೈದ್ ಅನ್ಸಾರಿ ಕೊಂಡುಹೋಗಿದ್ದರು. ಹಬೀಬ್ ಆ ಪತ್ರವನ್ನು ಮುಸೈಲಿಮನಿಗೆ ಕೊಟ್ಟಾಗ ಅವನು ಕೇಳಿದನು: ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರು ಎಂಬುದಕ್ಕೆ ನೀನು ಸಾಕ್ಷ್ಯವಹಿಸುತ್ತೀಯ? ಹೌದೆಂದು ಉತ್ತರಿಸಲಾಯಿತು. ಅನಂತರ ಅವನು ಕೇಳಿದನು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಎಂಬುದಕ್ಕೆ ನೀನು ಸಾಕ್ಷ್ಯವಹಿಸುತ್ತೀಯ? ಹಬೀಬ್ ಹೇಳಿದರು: ನಾನು ಕಿವುಡ, ನನಗೆ ಆಲಿಸಲು ಆಗುತ್ತಿಲ್ಲ. ಹೀಗೆ ಹೇಳಿ ಮಾತು ಬದಲಾಯಿಸಿದನು. ಮುಸೈಲಿಮ ಪದೇ ಪದೇ ಇದೇ ಸವಾಲನ್ನು ಕೇಳುತ್ತಿದ್ದನು. ಅವನು ಕೂಡ ನಬಿಯಾಗಿರುವನು ಎಂಬುದನ್ನು ಹಬೀಬ್ ಒಪ್ಪಬೇಕೆಂದು ಅವನು ಬಯಸುತ್ತಿದ್ದನು. ತಾನು ಬಯಸಿದ ಉತ್ತರ ಲಭಿಸದಿದ್ದಾಗ ಅವನು ಹಬೀಬರ ದೇಹದ ಒಂದು ಅಂಗವನ್ನು ಮುರಿಯುತ್ತಿದ್ದನು. ಹಝ್ರತ್ ಹಬೀಬ್(ರ) ಸಹನೆ ಮತ್ತು ಸ್ಥಿರಚಿತ್ತತೆಯ ಪರ್ವತವಾಗಿ ನಿಂತಿದ್ದರು. ಕೊನೆಗೆ ಅವನು ಅವರನ್ನು ತುಂಡುತುಂಡನ್ನಾಗಿ ಮಾಡಿದನು. ಅವನ ಮುಂದೆ ಹಝ್ರತ್ ಹಬೀಬ್(ರ) ಶಹಾದತಿನ ಪಾನೀಯವನ್ನು ಕುಡಿದರು. (ಸಯ್ಯಿದುನಾ ಅಬುಬಕ್ಕರ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಸಲಾಬಿ ಪುಟ–349)

ಅವನದ್ದು ಪ್ರವಾದಿತ್ವ ವಾದ ಮಾತ್ರವಾಗಿರಲಿಲ್ಲ. ಬದಲಾಗಿ ಅವನನ್ನು ನಬಿಯೆಂದು ನಂಬದವರೊಡನೆ ಅವನು ಈ ರೀತಿಯಾಗಿ ದೌರ್ಜನ್ಯದಿಂದ ವರ್ತಿಸಿದನು.

ಯಮಾಮದಲ್ಲಿ ಮುಸೈಲಿಮ ದಂಗೆಯ ಬಾವುಟವನ್ನು ಎತ್ತಿದನು. ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಯಾದ ಹಝ್ರತ್ ಸಮಾಮ ಬಿನ್ ಉಸಾಲನ್ನು ಮುಸೈಲಿಮ ಯಮಾಮದಿಂದ ಹೊರಕ್ಕೆ ಅಟ್ಟಿದನು. (ಹಝ್ರತ್ ಅಬುಬಕ್ಕರ್ ಸಿದ್ದೀಖ್ ಅಕ್ಬರ್, ಮುಹಮ್ಮದ್ ಹುಸೈನ್ ಹೈಕಲ್, ಅನುವಾದಕ ಶೂಖ್ ಮುಹಮ್ಮದ್ ಅಹ್ಮದ ಪಾನಿಪತಿ, ಪುಟ–101, ಇಲ್ಮೊ ಇರ್ಫಾನ್ ಪಬ್ಲಿಶರ್ಸ್, ಲಾಹೋರ್ 2004) (ತಾರೀಖುಲ್ ಖಮೀಸ್, ಸಂಪುಟ–3, ಪುಟ–81, ದಾರುಲ್ಕುತುಬ್ ಇಲ್‌ಮಿಯ ಬೈರೂತ್ 2009)

ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳ ಕಡೆಗೆ ಅನೇಕ ಸೇನೆಗಳನ್ನು ಕಳುಹಿಸಿದಾಗ ಹಝ್ರತ್ ಇಕ್ರಿಮ(ರ)ರ ನೇತೃತ್ವದಲ್ಲಿ ಒಂದು ಸೇನೆಯನ್ನು ಮುಸೈಲಿಮನ ಕಡೆಗೂ ಕಳುಹಿಸಿದರು. ಇಕ್ರಿಮರ ಸೈನ್ಯದ ಸಹಾಯಕ್ಕಾಗಿ ಅವರ ಹಿಂದೆ ಹಝ್ರತ್ ಶುರಹ್‌ಬೀಲ್ ಬಿನ್ ಹಸನರನ್ನು ಕಳುಹಿಸಿದರು. ಶುರಹ್‌ಬೀಲ್ ತಲುಪುವುದಕ್ಕೆ ಮುಂಚಿತವಾಗಿ ಮುಸೈಲಿಮನೊಡನೆ ಯುದ್ಧವನ್ನು ಆರಂಭಿಸಬಾರದು ಎಂದು ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮರನ್ನು ತಾಕೀತು ಮಾಡಿದರು. ಆದರೆ ಇಕ್ರಿಮ(ರ) ಅವಸರಪಟ್ಟರು ಮತ್ತು ವಿಜಯದ ಗರಿ ತನಗೆ ಸಿಗಲಿಕ್ಕಾಗಿ ಶುರಹ್‌ಬೀಲ್(ರ) ತಲುಪುವುದಕ್ಕೆ ಮುಂಚಿತವಾಗಿಯೇ ಯಮಾಮ ನಿವಾಸಿಗಳ ಮೇಲೆ ದಾಳಿ ನಡೆಸಿದರು. ಆದರೆ ಅವರು ವಿಪತ್ತಿಗೆ ಸಿಲುಕಿಕೊಂಡರು ಮತ್ತು ಸೋಲನ್ನು ಅನುಭವಿಸಬೇಕಾಯಿತು. ಮುಸೈಲಿಮನ ಸೈನ್ಯ ಬಹಳ ದೊಡ್ಡದಾಗಿತ್ತು. ಹಝ್ರತ್ ಶುರಹ್‌ಬೀಲ್‌ರಿಗೆ ಈ ಘಟನೆಯ ಬಗ್ಗೆ ಗೊತ್ತಾದಾಗ ಅವರು ಮಾರ್ಗದಲ್ಲೇ ನಿಂತು ಬಿಟ್ಟರು. ಹಝ್ರತ್ ಇಕ್ರಿಮ(ರ) ಹಝ್ರತ್ ಅಬೂಬಕರ್(ರ)ರಿಗೆ ಈ ಘಟನೆಯ ಬಗ್ಗೆ ಬರೆದರು. ಆಗ ಹಝ್ರತ್ ಅಬೂಬಕರ್(ರ) ಅವರಿಗೆ ಹೀಗೆ ಪತ್ರ ಬರೆದರು: ನಾನು ನಿನ್ನ ಮುಖವನ್ನು ನೋಡುವುದಿಲ್ಲ ಮತ್ತು ನೀನು ನನ್ನನ್ನು ಕೂಡ ನೋಡಬೇಡ. ನಾನು ಹೇಳಿದ ನಿರ್ದೇಶನವನ್ನು ನೀನು ಅನುಸರಿಸಲಿಲ್ಲ. ಜನರಲ್ಲಿ ಹೇಡಿತನ ಸೃಷ್ಟಿಯಾಗದಂತೆ ಮತ್ತೆ ಇಲ್ಲಿಗೆ ಮರಳಬೇಡ. ಹಝ್ರತ್ ಹುದೈಫಾ(ರ) ಮತ್ತು ಅರ್ಫಜ(ರ) ರವರ ಬಳಿ ಹೋಗಿ ಅವರೊಂದಿಗೆ ಸೇರಿ ಅಮ್ಮಾನ್ ಹಾಗೂ ಮಹ್ರಾ ಅವರೊಂದಿಗೆ ಹೋರಾಡಿ. ಮೆಹ್ರಾ ಕೂಡ ಅರೇಬಿಯಾದ ದಕ್ಷಿಣದ ಪೂರ್ವ ಕರಾವಳಿಯಲ್ಲಿ, ಹಿಂದೂ ಮಹಾಸಾಗರದ ತೀರದಲ್ಲಿದೆ. ತದನಂತರ ಅಲ್ಲಿಂದ ತನ್ನ ಸೈನ್ಯದೊಂದಿಗೆ ಯಮನ್ ಮತ್ತು ಹಝುರ್‌ಮೌತ್‌ಗೆ ಹೋಗಿ ಅಲ್ಲಿ ಹೋಗಿ ಇಸ್ಲಾಮಿನ ಸೈನ್ಯದೊಂದಿಗೆ ಸೇರಿಕೊಳ್ಳಿ. ಹಝುರ್‌ಮೌತ್ ಸಹ ಯೆಮೆನ್‌ನ ಪೂರ್ವದಲ್ಲಿ ಅದರ ದಕ್ಷಿಣ ಗಡಿಯಲ್ಲಿ ಸಮುದ್ರವನ್ನು ಹೊಂದಿರುವ ರಾಜ್ಯವಾಗಿದೆ.

ಇನ್ನೊಂದು ವರದಿಯಲ್ಲಿ, ಹಝ್ರತ್ ಅಬೂಬಕರ್(ರ) ಅವರ ಪತ್ರದ ಪದಗಳು ಬೋಧನೆಗಳ ಬಗ್ಗೆ ಅರಿವಿಲ್ಲ. ಶೀಘ್ರತ್ವಕ್ಕೆ ಹೆದರುತ್ತೀರಿ ಎಂಬ ರೀತಿಯಲ್ಲಿ ಕಂಡುಬರುತ್ತವೆ. ನಿನಗೆ ಅಷ್ಟು ಗೊತ್ತಿಲ್ಲವೆ. ನೀವು ಯುದ್ಧದ ವಿಧಾನಗಳಲ್ಲಿ ಇರಬೇಕಾದಷ್ಟು ಕೌಶಲ್ಯವನ್ನು ಹೊಂದಿಲ್ಲ ಮತ್ತು ನೀವು ಅದನ್ನು ಕಲಿಯಲು ಭಯಪಡುತ್ತೀರಿ. ನೀನು ನನ್ನನ್ನು ಭೇಟಿಯಾದ ದಿನ ನಾನು ನಿನ್ನನ್ನು ಹೇಗೆ ನಡೆಸಿಕೊಳ್ಳುತ್ತೇನೆಂದು ನೋಡು. ಶುರಹ್‌ಬೀಲ್ ಬರುವ ತನಕ ನೀನು ಏಕೆ ಕಾಯಲಿಲ್ಲ ಮತ್ತು ಅವರ ಸಹಾಯದಿಂದ ನೀನು ಯುದ್ಧ ಮಾಡಲಿಲ್ಲ. ಈಗ ಹುಝೈಫಾರ ಬಳಿ ಹೋಗಿ ಸಹಾಯ ಮಾಡು.

ನೀವು ಈಗ ಆ ಕಾಲದ ಖಲೀಫರ ಆದೇಶವನ್ನು ಉಲ್ಲಂಘಿಸಿದ್ದೀಯ ಮತ್ತು ನಿನ್ನನ್ನು ನೀನು ಬಹಳ ಶ್ರೇಷ್ಠ ಗುರು ಎಂದು ಪರಿಗಣಿಸಿದ್ದೀಯ ಮತ್ತು ಕಲಿಯಲು ಬಯಸುವುದಿಲ್ಲ. ಅಷ್ಟೇ, ಈಗ ನನ್ನ ಬಳಿಗೆ ಬರಬೇಡ. ನೀನು ಭೇಟಿಯಾದಾಗ, ನಿನ್ನೊಂದಿಗೆ ಏನು ಮಾಡಬೇಕೆಂದು ನಾನು ನೋಡುತ್ತೇನೆ. ಆದರೆ ಈಗ ಏನೇ ಇರಲಿ ಈಗ ನಿಮ್ಮ ಕೆಲಸವೇನೆಂದರೆ ನೀವು ಹುದೈಫಾರನ್ನು ಬಳಿ ಹೋಗಿ ಅವರನ್ನು ಮುನ್ನಡೆಸಲು ಕಳುಹಿಸಲಾಗಿರುವ ಅಭಿಯಾನದಲ್ಲಿ ಅವರಿಗೆ ಸಹಾಯ ಮಾಡಿ. ಅವರಿಗೆ ನಿಮ್ಮ ಬೆಂಬಲ ಅಗತ್ಯವಿಲ್ಲದಿದ್ದರೆ, ಯೆಮೆನ್ ಮತ್ತು ಹಝುರ್ ಮೌತ್‌ಗೆ ಹೋಗಿ ಮತ್ತು ಮುಹಾಜಿರ್ ಬಿನ್ ಉಮಯ್ಯ ಅವರಿಗೆ ಸಹಾಯ ಮಾಡಿ. ಹಝ್ರತ್ ಅಬುಬಕರ್(ರ) ಅವರು ಮುಹಾಜಿರ್ ಬಿನ್ ಉಮಯ್ಯ ಅವರನ್ನು ಕಿಂದ ಗೋತ್ರದೊಂದಿಗೆ ಹೋರಾಡಲುಲು ಹಝುರ್‌ಮೌತ್‌ಗೆ ಕಳುಹಿಸಿದ್ದರು. (ಸೀರತ್ ಖಲೀಫತುರ್ರಸೂಲ್ ಸಯ್ಯಿದುನಾ ಅಬುಬಕ್ಕರ್ ಸಿದ್ದೀಖ್(ರ), ತಾಲಿಬ್ ಹಾಶ್ಮಿ, ಪುಟ–204) (ಉರ್ದು ದಾಏರ ಮುಆರಿಫ್ ಇಸ್ಲಾಮಿಯ, ಸಂಪುಟ–21, ಪುಟ–898) (ಉದು ದಾಏರ ಮುಆರಿಫ್ ಇಸ್ಲಾಮಿಯ, ಸಂಪುಟ–8, ಪುಟ–408) (ಹಝ್ರತ್ ಅಬುಬಕ್ಕರ್ ಸಿದ್ದೀಖ್(ರ) ಕೆ ಸರ್ಕಾರಿ ಖುತೂತ್, ಪುಟ–24, ಪುಟ–1960) (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–257) (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ–2, ಪುಟ–219, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಯಾವುದಾದರೂ ಹೊಸ ಆದೇಶ ಕಳುಹಿಸಲಾಗುವ ತನಕ ಅಲ್ಲೇ ಇರಲು ಹಝ್ರತ್ ಅಬೂಬಕರ್(ರ) ಹಝ್ರತ್ ಶುರಹ್‌ಬೀಲ್(ರ)ರೊಡನೆ ಹೇಳಿದರು. ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಮುಸೈಲಿಮನ ಕಡೆಗೆ ಕಳುಹಿಸಿದರು. ಅದಲ್ಲದೆಯೂ ಅವರ ನೆರವಿಗಾಗಿ ಮತ್ತು ಅವರ ಹಿಂದಿನ ಭಾಗವನ್ನು ಸಂರಕ್ಷಿಸಲಿಕ್ಕಾಗಿ ಹಝ್ರತ್ ಸಲೀದ್(ರ)ರ ನೇತೃತ್ವದಲ್ಲಿ ಹೆಚ್ಚಿನ ಸಹಾಯಕ ಸೇನೆಯನ್ನೂ ಕಳುಹಿಸಿದರು. ಅವರ ಜೊತೆಗೆ ಸೇರಿಕೊಂಡು ಯುದ್ಧ ಮಾಡಲಿಕ್ಕಾಗಿ ಮುಹಾಜಿರ್ ಮತ್ತು ಅನ್ಸಾರರ ಒಂದು ಸಂಘವನ್ನು ಕೂಡ ಕಳುಹಿಸಿದರು. ಬುತಾಹ್ ಎಂಬ ಪ್ರದೇಶದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಈ ಸೇನೆ ಬರುವುದನ್ನು ಕಾಯುತ್ತಿದ್ದರು. ಅವರೆಲ್ಲರೂ ಖಾಲಿದ್(ರ)ರ ಬಳಿಗೆ

ತಲುಪಿದಾಗ ಅವರು ಯಮಾಮದ ಕಡೆಗೆ ಹೊರಟರು. ಮುಸೈಲಿಮರ ಸಹಾಯಕ್ಕಾಗಿ ಇದ್ದ ಯೋಧರ ಸಂಖ್ಯೆ 40 ಸಾವಿರ ಅಥವಾ ಮತ್ತೊಂದು ವರದಿ ಪ್ರಕಾರ ಒಂದು ಲಕ್ಷ ಅಥವಾ ಅದಕ್ಕಿಂತ ಹೆಚ್ಚಾಗಿತ್ತು. ಆದರೆ ಮುಸ್ಲಿಮರು 10 ಸಾವಿರಕ್ಕಿಂತ ಸ್ವಲ್ಪ ಹೆಚ್ಚಿದ್ದರು. (ಅಲ್ ಬಿದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–267, ದಾರುಲ್ ಕುತುಬ್ ಇಲ್‌ಮಿಯ) (ಫರ್ಹಂಗ್ ಸೀರತ್, ಪುಟ–58)

ಯುದ್ಧ ಶುರುವಾಗುವುದಕ್ಕೆ ಮುಂಚಿತವಾಗಿಯೇ ಮುಸ್ಲಿಮರು ಬನೂ ಹನೀಫದ ಒಬ್ಬ ಸರದಾರನನ್ನು ಬಂಧಿಸಿದರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಬನೂ ಹನೀಫದ ಒಬ್ಬ ಸರದಾರನಾದ ಮುಜಾಅ ಬಿನ್ ಮುರಾರ ಎಂಬವನು ಒಂದು ಗುಂಪಿನ ಜೊತೆಗೆ ಹೊರಟಾಗ ಮುಸ್ಲಿಮರು ಅವನನ್ನು ಮತ್ತು ಅವನ ಜೊತೆಗಾರರನ್ನು ಹಿಡಿಗೂಡಿದರು.
(ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ–2, ಪುಟ–219–220, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006) (ತಾರೀಖ್ ತಬರಿ, ಸಂಪುಟ–2, ಪುಟ–278, ದಾರುಲ್ ಕುತುಬ್ ಇಲ್‌ಮಿಯ 2012)

ಇದರ ಹೆಚ್ಚಿನ ವಿವರಗಳೆಂದರೆ ಹಝ್ರತ್ ಖಾಲಿದ್(ರ) ಆರಿಝ್ ಎಂಬ ಸ್ಥಳಕ್ಕೆ ಬಂದಿಳಿದಾಗ ಅವರು ಇನ್ನೂರು ಕುದುರೆ ಸವಾರುಗಳನ್ನು ಮುಂದಕ್ಕೆ ಕಳುಹಿಸಿದರು ಮತ್ತು "ನಿಮ್ಮನ್ನು ಭೇಟಿಯಾದವರನ್ನು ವಶಪಡಿಸಿಕೊಳ್ಳಿ" ಎಂದು ಹೇಳಿದರು. ಬನು ನುಮೈರನ ಜನರು ಒಬ್ಬ ವ್ಯಕ್ತಿಯನ್ನು ಹುಡುಕಲು ಹೊರಟಿದ್ದ ಅವನ ಇಪ್ಪತ್ತಮೂರು ಗೋತ್ರದ ಜನಾಂಗದವರೊಂದಿಗೆ ಮುಜಾಅ ಇಬ್ನ್ ಮುರಾರಾ ಹನಫಿಯನ್ನು ಸೆರೆಹಿಡಿಯುವವರೆಗೂ ಅವರು ಕುದುರೆಯ ಮೇಲೆ ಹೊರಟರು. ಅವರು ಹೊರಗೆ ಹೋದರು ಮತ್ತು ಖಾಲಿದ್ ಬರುತ್ತಿದ್ದಾರೆಂದು ಅವರಿಗೆ ತಿಳಿದಿರಲಿಲ್ಲ. ಮುಸ್ಲಿಮರು ಅವರನ್ನು ಕೇಳಿದರು, "ನೀವು ಯಾರು?" ಅವರು ಹೇಳಿದರು, ನಾವು ಬಾನು ಹನೀಫಾದಿಂದ ಬಂದವರು. ಮುಸ್ಲಿಮರು ಇವರು ಖಾಲಿದ್ ಕಡೆಗೆ ಮುಸಲ್ಮಾನನ ದೂತರಿರಬಹುದು ಎಂದು ಭಾವಿಸಿದ್ದರು. ಬೆಳಿಗ್ಗೆ ಬಂದು ಜನರು ಮುಖಾಮುಖಿಯಾದಾಗ ಮುಸ್ಲಿಮರು ಅವರೊಂದಿಗೆ ಖಾಲಿದ್‌ರವರ ಬಳಿಗೆ ಬಂದರು. ಹಝ್ರತ್ ಖಾಲಿದ್(ರ) ಅವರನ್ನು ಕಂಡಾಗ ಅವರು ಮುಸೈಲ್ಮನ ದೂತರು ಎಂದು ಭಾವಿಸಿದರು. ಹಝ್ರತ್ ಖಾಲಿದ್(ರ)ರು ಕೇಳಿದರು: ಓ ಬಾನು ಹನೀಫಾ! ನಿಮ್ಮ ಗುರು ಅಂದರೆ ಮುಸೈಲ್ಮಾನ ಬಗ್ಗೆ ನೀವು ಏನು ಹೇಳುತ್ತೀರಿ? ಅವರು ಅಲ್ಲಾಹನ ಸಂದೇಶವಾಹಕರು ಎಂದು ಸಾಕ್ಷ್ಯ ನೀಡಿದರು. ನೀವು ಏನು ಹೇಳುತ್ತೀರಿ ಎಂದು ಹಝ್ರತ್ ಖಾಲಿದ್(ರ) ಅವರು ಮುಜ್ಜಾಅನನ್ನು ಕೇಳಿದರು. ಅವರು ಉತ್ತರಿಸಿದರು, ಅಲ್ಲಾಹನಆಣೆ! ನಾನು ನಮ್ಮ ಗೋತ್ರದಲ್ಲಿ ಕೊಂದ ಬನು ನುವೈರನ ಓರ್ವ ವ್ಯಕ್ತಿಯನ್ನು ಹುಡುಕಲು ಹೊರಟಿರುವೆನು ಮತ್ತು ನಾನು ಮುಸೈಲ್ಮಾನ ಸಂಬಂಧಿಕನಲ್ಲ. ಹೇಗಿದ್ದರೂ ಅವನು ಆ ಕ್ಷಣದಲ್ಲಿ ಭಯದಿಂದ ಅಥವಾ ಯಾವುದೋ ಕಾರಣದಿಂದ ತನ್ನ ಮಾತಿನಿಂದ ಹಿಂದೆ ಸರಿದನು. ನಾನು ಪ್ರವಾದಿ(ಸ) ಅವರ ಸೇವೆಗೆ ಬಂದಿದ್ದೇನೆ ಮತ್ತು ನಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದೇನೆ ಮತ್ತು ನಾನು ಇನ್ನೂ ಆ ಸ್ಥಿತಿಯಲ್ಲಿಯೇ ಇದ್ದೇನೆ. ಉಳಿದವರನ್ನೂ ಕರೆತರಲಾಯಿತು. ಹಝ್ರತ್ ಖಾಲಿದ್(ರ) ಅವನ ಸಂಗಡಿಗರನ್ನು ವಧಿಸಿದರು. ಅವರಲ್ಲೇ ಒಬ್ಬನಾದ ಸಾರಿಯ ಬಿನ್ ಮುಸೈಲಿಮ ಬಿನ್ ಆಮಿರ್ ಹೀಗೆ ಸಲಹೆ ನೀಡಿದನು: ಹೇ ಖಾಲಿದ್, ನೀನು ಯಮಾಮ ನಿವಾಸಿಗಳಿಗೆ ಸಂಬಂಧಪಟ್ಟು ಏನಾದರೂ ಒಳಿತು ಅಥವಾ ಕೆಟ್ಟದ್ದನ್ನು ಬಯಸುವುದಾದರೆ ಮುಜಾಅನನ್ನು ಜೀವಂತವಾಗಿ ಉಳಿಸು. ಏಕೆಂದರೆ ಅವನು ಯುದ್ಧ ಮತ್ತು ಶಾಂತಿಯ ವೇಳೆ ನಿನ್ನ ಸಹಾಯಕನಾಗುವನು. ಖಾಲಿದ್(ರ)ರಿಗೆ ಅವನ ಮಾತು ಹಿಡಿಸಿತು ಮತ್ತು ಮುಜಾಅನನ್ನು ವಧಿಸಲಿಲ್ಲ ಹಾಗೂ ಸಾರಿಯನನ್ನು ಕೂಡ ಜೀವಂತವಾಗಿ ಉಳಿಸಿದರು. ನೀವು ಅವನನ್ನು ವಧಿಸಲಿಲ್ಲ ಮತ್ತು ಅವನನ್ನು ಕಬ್ಬಿಣದ ಸಂಕೋಲೆಯಿಂದ ಬಂಧಿಸಲು ಆದೇಶಿಸಿದರು. ಅವರು ಮುಜಾಅನನ್ನು ಕರೆಯುತ್ತಿದ್ದರು, ಅವನು ಸಂಕೋಲೆಯಲ್ಲಿ ಬಂಧಿತನಾಗಿದ್ದನು ಮತ್ತು ಅವನೊಂದಿಗೆ ಮಾತನಾಡುತ್ತಿದ್ದರು. ಹಝ್ರತ್ ಖಾಲಿದ್(ರ) ಅವರನ್ನು ವಧಿಸುತ್ತಾರೆ ಎಂದು ಮುಜಾಅ ಭಾವಿಸಿದ್ದನು. ಅವರಿಬ್ಬರೂ ಮಾತನಾಡುತ್ತಿರುವಾಗ ಮುಜಾಅ ಅವರಿಗೆ ಹೇಳಿದನು: ಓ ಇಬ್ನ್ ಮುಗೀರಾ (ಇದು ಖಾಲಿದ್ ಬಿನ್ ವಲೀದ್ ಅವರ ಉಪನಾಮ) ನಾನು ಮುಸಲ್ಮಾನನು. ಅಲ್ಲಾಹನ ಆಣೆ! ನಾನು ಕುಫರ್ ಮಾಡಲಿಲ್ಲ. ನಾನು ಪ್ರವಾದಿ(ಸ) ಅವರ ಸೇವೆಗೆ ಹಾಜರಾಗಿದ್ದೆ ಮತ್ತು ಅಲ್ಲಿಂದ ಮುಸಲ್ಮಾನನಾಗಿ ಮರಳಿದ್ದೇನೆ ಮತ್ತು ಈಗ ನಾನು ಯುದ್ಧಕ್ಕೆ ಹೊರಟಿರಲಿಲ್ಲ. ನಂತರ ಅವನು ನುವೈರನನ್ನು ಹುಡುಕುವ ವಿಷಯವನ್ನು ಪುನರಾವರ್ತಿಸಿದನು. ಹಝ್ರತ್ ಖಾಲಿದ್(ರ) ಅವರು ವಧಿಸುವುದು ಮತ್ತು ಬಿಡುಗಡೆಯ ನಡುವೆ ಸ್ವಲ್ಪ ಅಂತರವಿದೆ ಅಂದರೆ ಸೆರೆ ಎಂದು ಹೇಳಿದರು. ಎಲ್ಲಿಯವರೆಗೆ ಎಂದರೆ ಸರ್ವಶಕ್ತನಾದ ಅಲ್ಲಾಹನು ನಮ್ಮ ಯುದ್ಧದ ಬಗ್ಗೆ ನಿರ್ಧರಿಸಲಿರುವ ನಿರ್ಧಾರವನ್ನು ನೀಡುವವರೆಗೆ ಮತ್ತು ಮಾಲಿಕ್ ಬಿನ್ ನುವೈರನ ಹತ್ಯೆಯ ನಂತರ ನೀವು ಮದುವೆಯಾದ ನಿಮ್ಮ ಹೆಂಡತಿಯನ್ನು ಅವನಿಗೆ ನೀಡಿದರು. ಜೈಲಿನಲ್ಲಿ ಅವಳನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಆದೇಶಿಸಲಾಯಿತು. ಖಲೀದ್(ರ) ಶತ್ರುವಿನ ಬಗ್ಗೆ ತಿಳಿಯಲು ಅವನನ್ನು ಜೈಲಿನಲ್ಲಿಡಲು ಬಯಸುತ್ತಾನೆ ಎಂದು ಮುಜಾಅ ತಿಳಿದಿದ್ದನು. ಅದಕ್ಕೆ ಅವನು ಹೇಳಿದನು, "ನಾನು ಪ್ರವಾದಿ(ಸ) ಅವರ ಸೇವೆಗೆ ಬಂದಿದ್ದೇನೆ ಮತ್ತು ಇಸ್ಲಾಂ ಧರ್ಮದ ನಿಷ್ಠೆಯನ್ನು ಪ್ರತಿಜ್ಞೆ ಮಾಡಿದ್ದೇನೆ ಎಂದು ನಿಮಗೆ ತಿಳಿದಿದೆ." ಅವನು ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದನು. ನಂತರ ನಾನು ನನ್ನ ಜನರ ಬಳಿಗೆ ಮರಳಿದೆ ಮತ್ತು ಇಂದು ನಾನು ಅದೇ ಸ್ಥಿತಿಯಲ್ಲಿದ್ದೇನೆ ಎಂದು ಹೇಳಿದನು. ಆದರೆ ಮುಂದಿನ ಘಟನೆಗಳು ಅದೆಲ್ಲವೂ ತಪ್ಪು ನಿರೂಪಣೆ ಎಂದು ತೋರಿಸುತ್ತದೆ. ನನ್ನ ಸ್ಥಿತಿ ಇಂದು ನಿನ್ನೆಯಂತೆಯೇ ಇದೆ ಎನ್ನುತ್ತಾನೆ. (ಅಲ್‌ಇಖ್ತಿಫಾ ಬಿಮಾ ತಝುಮ್ಮನ......, ಭಾಗ–2, ಪುಟ–119,120, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1420ಹಿ)

ಮುಜಾಅನ ತಂಡವನ್ನು ತೊರೆದ ನಂತರ ಹಝ್ರತ್ ಖಾಲಿದ್(ರ) ಯಮಾಮಕ್ಕೆ ಹೋದರು.

ಹಝ್ರತ್ ಖಾಲಿದ್(ರ) ಯಮಾಮದ ಕಡೆಗೆ ಹೊರಟರು ಮತ್ತು ಶಕ್ತವಾದ ಯೋಜನೆಯ ಏರ್ಪಾಡು ಮಾಡಿದರು. ಹಝ್ರತ್ ಖಾಲಿದ್(ರ) ಎಂದಿಗೂ ತನ್ನ ಶತ್ರುವನ್ನು ದುರ್ಬಲವೆಂದು ಭಾವಿಸುತ್ತಿರಲಿಲ್ಲ. ಶತ್ರುಗಳು ಹಠಾತಾಗಿ ದಾಳಿ ನಡೆಸಿದಿರಲು ಮತ್ತು ಯಾವುದಾದರೂ ಕುತಂತ್ರ ಮಾಡದಿರಲು ಅವರು ಯುದ್ಧ ಮೈದಾನದಲ್ಲಿ ಸದಾ ಪೂರ್ತಿ ತಯಾರಿ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಇರುತ್ತಿದ್ದರು. ಅವರು ಸ್ವತಃ ನಿದ್ದೆ ಮಾಡುತ್ತಿರಲಿಲ್ಲ. ಆದರೆ ಇತರರನ್ನು ನಿದ್ದೆ ಮಾಡಲು ಬಿಡುತ್ತಿದ್ದರು. ಪೂರ್ತಿ ತಯಾರಿಯೊಂದಿಗೆ ರಾತ್ರಿ ಸಮಯ ಕಳೆಯುತ್ತಿದ್ದರು. ಶತ್ರುಗಳ ಯಾವುದೇ ಸಂಗತಿ ಅವರಿಗೆ ಗೊತ್ತಿಲ್ಲದೇ ಇರುತ್ತಿರಲಿಲ್ಲ. ಸೈನ್ಯವನ್ನು ಕ್ರಮಪಡಿಸುವ ಸಮಯ ಸಮೀಪವಾಗುತ್ತಿತ್ತು. ಈ ಯುದ್ಧದ ಧ್ವಜವಾಹಕ ಹಝ್ರತ್ ಅಬ್ದುಲ್ಲಾಹ್ ಬಿನ್ ಹಫ್ಸ್ ಬಿನ್ ಗ್ವಾನಿಬ್ ಆಗಿದ್ದರು. ಅನಂತರ ಇದು ಹಝ್ರತ್ ಸಾಲಿಂ ಮೌಲಾ ಅಬೂಹುದೈಫ್‌ರಿಗೆ ಹಸ್ತಾಂತರಿಸಲಾಯಿತು. ಅವರು ಹಝ್ರತ್ ಶುರಹ್‌ಬೀಲ್ ಬಿನ್ ಹಸನರನ್ನು ಮುಂದಕ್ಕೆ ಕಳುಹಿಸಿದರು. ಇಸ್ಲಾಮಿನ ಸೈನ್ಯವನ್ನು ಐದು ಭಾಗಗಳನ್ನಾಗಿ ವಿಂಗಡಿಸಿದರು. ಅದು ಯುದ್ಧಕ್ಕಿಂತ ಮುಂಚಿತವಾಗಿ ಮಾಡಲಾಗುವ ಕೊನೆಯ ಕ್ರಮವಾಗಿತ್ತು. (ಡಾ. ಅಲಿ ಮುಹಮ್ಮದ್ ಅಲ್–ಸಲಾಬಿ, ಸೈಯದ್ನಾ ಅಬು ಬಕರ್ ಸಿದ್ದಿಕ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟಗಳು–358, 357)

ಮತ್ತೊಂದೆಡೆ ಮುಸಲ್ಮಾ ಕಝ್ಝಾಬನ ಸೈನ್ಯವೂ ಸಿದ್ಧವಾಗಿ ನಿಂತಿತ್ತು ಮತ್ತು ಮುಸೈಲ್ಮನ ಮಗ ಶುರಹಬೀಲ್ ತನ್ನ ಗೋತ್ರದವರಿಗೆ ಹೇಳಿದನು: ಓ ಬಾನು ಹನೀಫಾ! ಇಂದು ಅಭಿಮಾನವನ್ನು ತೋರಿಸುವ ದಿನವಾಗಿದೆ. ನೀವು ಇಂದು ಸೋಲಿಸಲ್ಪಟ್ಟರೆ, ನಿಮ್ಮ ಮಹಿಳೆಯರನ್ನು ಗುಲಾಮರನ್ನಾಗಿ ಮಾಡುತ್ತಾರೆ ಮತ್ತು ಅವರು ಮದುವೆಯಾಗದೆ ಲಾಭ ಪಡೆಯುತ್ತಾರೆ. ಆದ್ದರಿಂದ, ಇಂದು, ನಿಮ್ಮ ಗೌರವ ಮತ್ತು ಘನತೆಯನ್ನು ರಕ್ಷಿಸಲು, ಪೂರ್ಣ ಪುರುಷತ್ವವನ್ನು ತೋರಿಸಿ ಮತ್ತು ನಿಮ್ಮ ಮಹಿಳೆಯರನ್ನು ರಕ್ಷಿಸಿ. (ಜಾಫರ್ ಮುಹಮ್ಮದ್ ಇಬ್ನ್ ಅಲ್–ತಬರಿ ಅವರಿಂದ ತಾರಿಖ್ ಅಲ್–ತಬರಿ ಲಾಬಿ, ಸಂಪುಟ–2, ಪುಟ–278, ದಾರುಲ್ ಕುತುಬ್ ಇಲ್‌ಮಿಯ, 2012)

ಆದಾಗ್ಯೂ, ಭೀಕರ ಯುದ್ಧವು ನಡೆಯಿತು. ಆ ಯುದ್ಧವು ಎಷ್ಟು ಭೀಕರವಾಗಿತ್ತು ಎಂದರೆ ಮುಸ್ಲಿಮರು ಹಿಂದೆಂದೂ ಅಂತಹ ಯುದ್ಧವನ್ನು ಎದುರಿಸಿರಲಿಲ್ಲ. ಮುಸ್ಲಿಮರು ಹಿಮ್ಮೆಟ್ಟಿದರು. ಇಲ್ಲಿಯೂ ಅವರು ಹಿಮ್ಮೆಟ್ಟಿದರು ಮತ್ತು ಬನು ಹನೀಫಾದ ಜನರು ಮುಜಾಅನನ್ನು ರಕ್ಷಿಸಲು ಮುಂದಾದರು ಮತ್ತು ಹಝ್ರತ್ ಖಾಲಿದ್(ರ) ಅವರ ಡೇರೆಗೆ ಧಾವಿಸಿದರು. ಹಝ್ರತ್ ಖಾಲಿದ್(ರ) ಅವರು ತಮ್ಮ ಡೇರೆಯನ್ನು ತೊರೆದಿದ್ದರಿಂದ ಹಝ್ರತ್ ಖಾಲಿದ್(ರ) ಅವರ ಪತ್ನಿಯ ಆಶ್ರಯದಲ್ಲಿದ್ದ ಮುಜಾಅವ ಬಳಿ ತಲುಪಿದರು. ಧರ್ಮತ್ಯಾಗಿಗಳು ಬಂದು ಅವರ ಹೆಂಡತಿಯನ್ನು ಕೊಲ್ಲಲು ಬಯಸಿದರು ಆದರೆ ಮುಜಾಅ ಅವರನ್ನು ತಡೆದು ಅವಳಿಗೆ ಆಶ್ರಯ ನೀಡುವುದಾಗಿ ಹೇಳಿದನು. ಆದ್ದರಿಂದ ಅವರು ಅವಳನ್ನು ಹೋಗಲು ಬಿಟ್ಟರು. ಮುಜಾಅವ ಹೇಳಿದನು: "ಪುರುಷರ ಮೇಲೆ ದಾಳಿ ಮಾಡಿ." ಒಂದೆಡೆ ನಾನೊಬ್ಬ ಮುಸಲ್ಮಾನ ಎಂಬ ವಾದವಿತ್ತು, ಈಗ ಈ ವಿರೋಧಿಗಳಿಗೆ ಪುರುಷರ ಮೇಲೆ ದಾಳಿ ಮಾಡಲು ಮತ್ತು ಅವರ ಡೇರೆಗಳನ್ನು ಕಡಿದು ಹಾಕಲು ಆದೇಶಿಸುತ್ತಿದ್ದಾನೆ.
(ಅಲ್–ಕಾಮಿಲ್ ಫಿಲ್–ತಾರಿಖ್ ಇಬ್ನ್ ಅಸೀರ್, ಝಿಕ್ರ್ ಮುಸ್ಲಿಮಾಹ್

ವಾಲ್ ಅಲ್-ಇಮಾಮಾ, ಸಂಪುಟ-2, ಪುಟ-221, ದಾರ್ ಅಲ್-ಕುತುಬ್ ಅಲ್-ಇಲ್ಮಿಯ ಬೈರುತ್ 2003)

ಇಸ್ಲಾಮಿನ ಸೇನೆ ಹಿಂದಕ್ಕೆ ಸರಿದರೂ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ದೃಢನಿಶ್ಚಯ, ಸ್ಥೈರ್ಯ, ಧೈರ್ಯ ಮತ್ತು ಸ್ಥಿರಚಿತ್ತತೆಯಲ್ಲಿ ಅಲ್ಪವೂ ನಡುಕ ಉಂಟಾಗಲಿಲ್ಲ. ಅವರು ಕೂಗುತ್ತಾ ತನ್ನ ಸೈನ್ಯದೊಡನೆ ಹೇಳಿದರು: ಎಲೈ ಮುಸ್ಲಿಮರೇ, ಯಾವ ಗೋತ್ರದವರು ಯುದ್ಧದಲ್ಲಿ ಅತ್ಯಂತ ಶೌರ್ಯವನ್ನು ತೋರಿಸಿದೆ ಎಂದು ಗೊತ್ತಾಗಲು ಬೇರ್ಪಟ್ಟು ನಿಲ್ಲಿರಿ. ಈ ಘೋಷಣೆಯಿಂದ ಎಲ್ಲ ಗೋತ್ರಗಳೊಳಗೆ ಅವರು ಒಂದು ಹೊಸ ಚೈತನ್ಯ ಮತ್ತು ಸ್ಪರ್ಧಾ ಮನೋಭಾವವನ್ನು ಉಂಟುಮಾಡಿದರು. (ಹಝ್ರತ್ ಅಬುಬಕರ್ ಸಿದ್ದಿಕ್(ರ), ಮುಹಮ್ಮದ್ ಹುಸೇನ್ ಹೈಕಲ್, (ಅನುವಾದಕ) ಪುಟಗಳು 195-196)

ಮುಸ್ಲಿಮರೂ ಪರಸ್ಪರ ಪ್ರೋತ್ಸಾಹಿಸಿದರು. ಆದ್ದರಿಂದ, ಅದರ ವಿವರವು ಹೀಗೆ ದೊರೆಯುತ್ತದೆ ಹಝ್ರತ್ ಸಾಬಿತ್ ಬಿನ್ ಕೈಸ್ ಹೀಗೆ ಹೇಳಿದರು: ಓ ಮುಸ್ಲಿಮರ ಗುಂಪೇ, ನೀವು ಒಗ್ಗಿಕೊಂಡಿರುವ ವಿಷಯವು ಎಷ್ಟು ಕೆಟ್ಟದಾಗಿದೆ, ನೀವು ಅದನ್ನು ಸುಲಭಗೊಳಿಸಲು ಒಗ್ಗಿಕೊಂಡಿದ್ದರೆ, ಅದು ತುಂಬಾ ಕೆಟ್ಟ ವಿಷಯವಾಗಿದೆ. ಯುದ್ಧ ಮಾಡಲಿಕ್ಕಾಗಿ ಶ್ರೇಷ್ಠ ಸಹಾಬಿಯರು ಪರಸ್ಪರ ಪ್ರೇರೇಪಿಸಲು ಶುರುಮಾಡಿದರು ಮತ್ತು ಹೀಗೆ ಹೇಳಿದರು: ಎಲೈ ಸೂರಃ ಬಖರಃದವರೇ, ಇಂದು ಜಾದೂ ನಿಷ್ಫಲವಾಯಿತು. ಹಝ್ರತ್ ಸಾಬಿತ್ ಬಿನ್ ಖೈಸ್(ರ) ಮೊಣಕಾಲು ತನಕ ಹೊಂಡವನ್ನು ಅಗೆದರು ಮತ್ತು ತನ್ನನ್ನು ತಾವೇ ಅದರಲ್ಲಿ ಹೂತುಹಾಕಿದರು. ಅವರು ಅನ್ಸಾರರ ಧ್ವಜವನ್ನು ಎತ್ತಿಕೊಂಡಿದ್ದರು ಮತ್ತು ಅವರು ಹನೂತನ್ನು ಸವರಿಕೊಂಡಿದ್ದರು. (ಹನೂತ್ ಎಂಬುದು ಮೃತದೇಹದ ಮೇಲೆ ಸವರಲಾಗುವ ಒಂದು ಸುಗಂಧದ್ರವ್ಯವಾಗಿದೆ) ಮರಣದ ನಂತರ ಜನರು ಅವರ ಜೊತೆಗೆ ಮಾಡಲಿರುವ ಕೆಲಸವನ್ನು ಅವರು ಸ್ವತಃ ಮಾಡಿಕೊಂಡಿರುವರು ಮತ್ತು ಅವರು ಸಾಯಲು ತಯಾರಿರುವರು ಎಂಬುದಾಗಿ ಅವರು ಈ ರೀತಿಯಾಗಿ ತೋರಿಸುತ್ತಿದ್ದರು. ಅವರು ಕಫನ್ ಕಟ್ಟಿದರು ಮತ್ತು ಶತ್ರುಗಳ ಮುಂದೆ ಸ್ಥೈರ್ಯದಿಂದ ಇದ್ದರು ಮತ್ತು ಶಹೀದ್ ಆದರು ಎಂದು ವರದಿಯಾಗಿದೆ. ಇದರ ವಿವರಣೆ ಮುಂದುವರೆಯುವುದು. ಇನ್ಶಾ ಅಲ್ಲಾಹ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಮೊತ್ತಮೊದಲು ಒಬ್ಬ ಶಹೀದರ ಪ್ರಸ್ತಾಪವಾಗಿದೆ. ಅವರನ್ನು ಕೆಲವು ದಿನಗಳ ಹಿಂದೆ ಶಹೀದ್ ಮಾಡಲಾಯಿತು. ಅವರು ಎಲ್ ಪ್ಲಾಟ್ ಒಕಾಡದ ಮಾಸ್ಟರ್ ಮುನವ್ವರ್ ಅಹ್ಮದ್ ಸಾಹಿಬ್‌ರ ಮಗನಾದ ಅಬ್ದುಸ್ಸಲಾಂ ಆಗಿದ್ದರು. ಅವರನ್ನು ಮೇ 17ರಂದು ಶಹೀದ್ ಮಾಡಲಾಯಿತು. ಅವರಿಗೆ 35 ವರ್ಷ ಪ್ರಾಯವಾಗಿತ್ತು. ಅಹ್ಮದಿಯ್ಯತ್ತಿನ ಒಬ್ಬ ಶತ್ರು ಚಾಕುವಿನಿಂದ ಹಲ್ಲೆ ನಡೆಸಿ ಅವರನ್ನು ಶಹೀದ್ ಮಾಡಿದ್ದನು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಲಭಿಸಿದ ವಿವರ ಪ್ರಕಾರ ಅಬ್ದುಸ್ಸಲಾಂ ಸಾಹಿಬ್‌ರು ತನ್ನಿಬ್ಬರು ಸಣ್ಣ ಮಕ್ಕಳಾದ 6 ವರ್ಷ ಪ್ರಾಯದ ಖಮರ್ ಇಸ್ಲಾಂ, ಮತ್ತು 4 ವಯಸ್ಸಿನ ಬದ್ರುಸ್ಸಲಾಂ ಜೊತೆಗೆ ಯಾವುದೋ ಕೆಲಸಕ್ಕಾಗಿ ಮನೆಯಿಂದ ಹೊರಟಿದ್ದರು. ಅವರನ್ನು ನೀರಿನ ಕನೆಕ್ಷನ್ ಸರಿಪಡಿಸಲು ಕರೆಯಲಾಗಿತ್ತು. ಇದು ಕೂಡ ಶತ್ರುಗಳ ಪ್ಲಾನಿಂಗ್ ಆಗಿರಬೇಕು. ಅವರ ಮೇಲೆ ಹಿಂದಿನಿಂದ ಹಲ್ಲೆ ನಡೆಸಲಾಯಿತು. ಅವರು ಮನೆಯಿಂದ ಹೊರಗೆ ಬಂದು ನಡೆಯುತ್ತಿದ್ದಾಗ ಹಾಫಿಝ್ ಅಲಿರಝಾ ಎಂಬ ಹೆಸರಿನ ಅಹ್ಮದಿಯ್ಯತ್ತಿನ ಶತ್ರು ಒಬ್ಬನು ಅವರನ್ನು ಹಿಂಬಾಲಿಸಿದನು ಮತ್ತು ಚಾಕುವಿನಿಂದ ಹಲ್ಲೆ ನಡೆಸಿದನು. ಸಂಜೆ ಸಮಯವಾಗಿತ್ತು. ಹಲ್ಲೆಯ ಪರಿಣಾಮವಾಗಿ ಗಾಯಗೊಂಡ ಅಬ್ದುಸ್ಸಲಾಂ ಸಾಹಿಬ್‌ರು ಎರಡು ಮುಗ್ಧ ಮಕ್ಕಳ ಮುಂದೆ ಅಲ್ಲೇ ಶಹೀದ್ ಆದರು. ಅವರ ಮೇಲೆ ಮೊದಲು ಹಿಂದಿನಿಂದ ಹಲ್ಲೆ ನಡೆಸಲಾಗಿತ್ತು. ಕಿಡ್ನಿಯನ್ನು ತುಂಡರಿಸಲಾಯಿತು. ಅನಂತರ ಕರುಳಿನ ಮೇಲೆ ಹಲ್ಲೆ ನಡೆಸಲಾಯಿತು. ಹೀಗೆ ಸ್ಥಳದಲ್ಲೇ ಮಕ್ಕಳ ಮುಂದಿನಿಂದಲೇ ಅವರು ಶಹೀದ್ ಆದರು. ಅಪರಾಧಿಯು ಘಟನೆ ಸ್ಥಳದಿಂದ ಪರಾರಿಯಾದನು. ಇಂತಹ ಕೊಲೆಗಾರರು ಸ್ವರ್ಗವನ್ನು ಗಳಿಸಲು ಅಹ್ಮದಿಯರನ್ನು ಶಹೀದ್ ಮಾಡುತ್ತಾರೆ. ಈ ಕೊಲೆಗಾರ ಅಲ್ಲಿಯ ಸ್ಥಳೀಯ ಮದ್ರಸವಾದ ಜಾಮಿಅ ಅಮೀನಿಯ ಫರೀದಿಯದ ವಿದ್ಯಾರ್ಥಿಯಾಗಿದ್ದನು. ಘಟನೆ ನಡೆಯುವುದಕ್ಕೆ ಎರಡು ದಿನಗಳಿಗೆ ಮುಂಚಿತವಾಗಿಯೇ ಮದ್ರಸದಿಂದ ಹಿಫ್ಝ್ ಕೋರ್ಸ್ ಪೂರ್ತಿಗೊಳಿಸಿ ತೇರ್ಗಡೆಯಾಗಿದ್ದನು. ಮದ್ರಸದಲ್ಲಿ ನಡೆದ ಹಿಫ್ಝಿನ ಸಮಾರೋಪ ಸಮಾರಂಭದಲ್ಲಿ ಮದ್ರಸದ ಆಡಳಿತಗಾರ ಮೌಲವಿಯು ತನ್ನ ಭಾಷಣದಲ್ಲಿ, ಜಮಾಅತಿನ ವಿರುದ್ಧ ಕಾರ್ಯಾಚರಣೆ ನಡೆಸಬೇಕೆಂದೂ ಶಕ್ತವಾದ ಹೆಜ್ಜೆಗಳನ್ನು ತೆಗೆಯಬೇಕೆಂದೂ ಹೇಳಿದನು. ಹೇಗಿದ್ದರೂ ಇವರು ಯಾವ ರೀತಿಯಲ್ಲಿ ಜನರಿಗೆ ಸ್ವರ್ಗವನ್ನು ನೀಡಲು ಬಯಸುತ್ತಾರೋ ಅದರಿಂದ ಸ್ವತಃ ನರಕದ ಮಾರ್ಗವನ್ನು ಹುಡುಕುತ್ತಿರುವರು ಮತ್ತು ಜನರನ್ನು ಕೂಡ ನರಕಕ್ಕೆ ತಳ್ಳುವ ಪ್ರಯತ್ನವನ್ನು ಮಾಡುತ್ತಿರುವರು.

ಶಹೀದ್ ಅಬ್ದುಸ್ಸಲಾಮರ ಕುಟುಂಬದಲ್ಲಿ ಅಹ್ಮದಿಯ್ಯತಿನ ಪ್ರವೇಶ ಅವರ ತಾತರ ತಂದೆಯಾದ ಹಝ್ರತ್ ನಬಿ ಬಖ್ಷ್ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾಗಿದ್ದರು. ಅವರು ಹೋಶಿಯಾರ್‌ಪುರ್ ಜಿಲ್ಲೆಯ ಫಮಿಯಾದಲ್ಲಿ ನೆಲೆಸಿದ್ದರು. ಶಹೀದ್ ಅಬ್ದುಸ್ಸಲಾಮರ ತಾತರಾದ ಮುಹಮ್ಮದ್ ಸಿದ್ದೀಖ್ ಸಾಹಿಬ್ ಜನ್ಮತಃ ಅಹ್ಮದಿಯಾಗಿದ್ದರು. ಈ ಜನರು ಪಾಕಿಸ್ತಾನಕ್ಕೆ ಬಂದು ಓಕಾಡದಲ್ಲಿ ನೆಲೆಸಿದ್ದರು. ಶಹೀದ್ ಅಬ್ದುಸ್ಸಲಾಂ ಹತ್ತನೇ ತರಗತಿ ತನಕ ಕಲಿತ ನಂತರ ಕೃಷಿ ಕೆಲಸವನ್ನು ಮಾಡುತ್ತಿದ್ದರು. ವಖ್ಫೇ ನೌಯಿನ ಅನುಗ್ರಹೀತ ಯೋಜನೆಯಲ್ಲಿ ಇದ್ದರು. ನೀನು ವಖ್ಫೇ ನೌ ಆಗಿರುವಿ, ನಿನ್ನ ಇಬ್ಬರು ಸಹೋದರರು ಮುಬಲ್ಲಿಗ್ ಆಗಿರುವರು, ನೀನು ಆಗಿಲ್ಲವೆಂದು ಅವರ ತಾಯಿ ಅವರೊಡನೆ ಹೇಳುವಾಗ ಅವರು ಹೀಗೆ ಹೇಳುತ್ತಿದ್ದರು: ನಾನು ಅವರ ಸೇವೆ ಮಾಡುತ್ತಿದ್ದೇನೆ. ಅಲ್ಲಾಹನು ನನ್ನ ಸೇವೆಯನ್ನು ಕೂಡ ಸ್ವೀಕಾರ ಮಾಡುವನು. ನಾನು ನನ್ನ ಕುಟುಂಬದ ಇತರ ಸದಸ್ಯರಿಗಾಗಿ ಮತ್ತು ಪತ್ನಿ ಮಕ್ಕಳಿಗಾಗಿ ಮಾಡುವ ಸೇವೆಯನ್ನು ಅಲ್ಲಾಹನು ಸ್ವೀಕಾರ ಮಾಡುವನು. ಏಕೆಂದರೆ, ಸಂಪೂರ್ಣ ಕುಟುಂಬದ ಭಾರವನ್ನು ಅವರು ಎತ್ತಿದ್ದರು. ಅವರು ಖುದ್ದಾಮುಲ್ ಅಹ್ಮದಿಯಾದ ಖಾಇದ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದರು. ಅತ್ಯಂತ ಸ್ನೇಹಮಯಿಯಾಗಿದ್ದರು. ಭೇಟಿಯಾಗುವವರೊಂದಿಗೆ ಸ್ವಂತರಂತೆ ಆಗುತ್ತಿದ್ದರು. ಬಹಳ ದೌರ್ಜನ್ಯ ನಡೆದಿದೆ ಎಂದು ಅವರ ಪರಿಚಿತರಾದ ಅಹ್ಮದಿಯೇತರು ಕೂಡ ಹೇಳುತ್ತಾರೆ. ಆದರೆ ಭಯೋತ್ಪಾದಕ ಮುಲ್ಲಾಗಳ ಮುಂದೆ ಹೇಳುವ ಧೈರ್ಯ ಯಾರಿಗೂ ಇಲ್ಲ. ಪಾಕಿಸ್ತಾನದಲ್ಲಿ ಅವರು ಸಂಪೂರ್ಣವಾಗಿಯೂ ಮೂಕ ಸಭ್ಯತೆ ತೋರಿಸುತ್ತಿದ್ದಾರೆ. ಶಹೀದ್ ಅಬ್ದುಸ್ಸಲಾಮ್‌ರಿಗೆ ಖಿಲಾಫತ್‌ನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ಪ್ರೇಮವಿತ್ತು ಎಂದು ಅವರ ಸಹೋದರರು ಮತ್ತು ಸಂಬಂಧಿಕರು ಹೇಳುತ್ತಾರೆ. ಅಹ್ಮದಿ ಮತ್ತು ಅಹ್ಮದಿಯೇತರರು ಎಂಬ ಭೇದಭಾವವಿಲ್ಲದೇ ಮೌನವಾಗಿ ನಿರ್ಗತಿಕರ ಸಹಾಯ ಮಾಡುತ್ತಿದ್ದರು. ಅತಿಥಿ ಸತ್ಕಾರ ಅವರು ಪ್ರಧಾನ ಗುಣವಾಗಿತ್ತು. ವಿಶೇಷವಾಗಿ ಕೇಂದ್ರ ಪ್ರತಿನಿಧಿಗಳನ್ನು ಸೇವೆ ಸಲ್ಲಿಸುವುದರಲ್ಲಿ ಬಹಳ ಮುಂದಿರುತ್ತಿದ್ದರು. ಬಹಳ ನಿರ್ಭೀತರೂ ಧೈರ್ಯಶಾಲಿಯೂ ಆದ ವ್ಯಕ್ತಿಯಾಗಿದ್ದರು ಎಂದು ಕುಟುಂಬದವರೆಲ್ಲರೂ ಅವರ ಕುರಿತು ಬರೆದಿರುವರು. ಹಿಂದೆಯೂ ಈದ್ ಹಬ್ಬಗಳ ಸಮಯಗಳಲ್ಲಿ ದಿವಂಗತರನ್ನು ದೌರ್ಜನ್ಯಕ್ಕೆ ಗುರಿಪಡಿಸಲಾಗಿತ್ತು. ಹೇಗಿದ್ದರೂ ಅಲ್ಲಾಹನು ಆ ಸಮಯದಲ್ಲಿ ಅವರ ಸಂರಕ್ಷಣೆ ಮಾಡುತ್ತಿದ್ದನು. ಆದರೆ ಈಗ ಇದು ದೇವವಿಧಿಯಾಗಿತ್ತು.

ಶಹೀದ್ ಅಬ್ದುಸ್ಸಲಾಮರು ತನ್ನ ತಂದೆಯಾದ ಮಾಸ್ಟರ್ ಮುನವ್ವರ್ ಅಹ್ಮದ್ ಸಾಹಿಬ್, ತಾಯಿಯಾದ ಶಂಶಾದ್ ಕೌಸರ್ ಸಾಹಿಬರನ್ನಲ್ಲದೇ ಪತ್ನಿಯಾದ ಫರ್ಝಾನ ಇರಮ್ ಮತ್ತು ಮೂವರು ಸಣ್ಣ ಮಕ್ಕಳಾದ 6 ವರ್ಷ ಪ್ರಾಯದ ಖಮರುಲ್ ಇಸ್ಲಾಂ, ನಾಲ್ಕುವರೆ ವರ್ಷ ಪ್ರಾಯದ ಬದ್ರುಲ್ ಇಸ್ಲಾಂ ಮತ್ತು ಒಂದುವರೆ ಪ್ರಾಯದ ಸಿಫ್ರರನ್ನು ಅಗಲಿರುವರು. ಶಹೀದ್ ಅಬ್ದುಸ್ಸಲಾಮರಿಗೆ ನಾಲ್ವರು ಸಹೋದರರು ಕೂಡ ಇರುವರು. ಅವರಲ್ಲಿ ಝುಹೂರ್ ತೌಖೀರ್ ಸಾಹಿಬ್ ರಿಸರ್ಚ್ ಸೆಲ್‌ನಲ್ಲಿ ಮುಬಲ್ಲಿಗ್ ಆಗಿರುವರು, ಹಾಫಿಝ್ ಅನ್ವಾರ್ ಅಹ್ಮದ್ ಸಾಹಿಬ್‌ರು ಪಾಕಿಸ್ತಾನದಲ್ಲಿ ಮುರಬ್ಬಿ ಯಾಗಿರುವರು. ಅದಲ್ಲದೇ ಒಬ್ಬ ಸಹೋದರ ಲಂಡನಿನಲ್ಲೂ ಮತ್ತೊಬ್ಬ ಸಹೋದರ ರಬ್ವದಲ್ಲೂ ಇರುವರು. ಮೂವರು ಸಹೋದರಿಯರು ಕೂಡ ಇರುವರು. ಅವರಲ್ಲಿ ಒಬ್ಬಳು ಯು.ಕೆ.ಯಲ್ಲಿ ಇರುವಳು. ಮತ್ತೊಬ್ಬಳು ಕುವೈತಿನಲ್ಲಿ ಇರುವಳು. ಮೂರನೆಯವಳು ಲಂಡನಿನಲ್ಲಿ ಇರುವಳು. ಅಲ್ಲಾಹನು ಶಹೀದ್ ಅಬ್ದುಸ್ಸಲಾಮರ ಪದವಿಗಳನ್ನು ಉನ್ನತಗೊಳಿಸಲಿ, ಜನ್ನತುಲ್ ಫಿರ್‌ದೌಸಿನಲ್ಲಿ ಉನ್ನತ ಸ್ಥಾನವನ್ನು ನೀಡಲಿ. ಶಹೀದ್‌ರ ಮುಗ್ಧ ಮಕ್ಕಳ, ಪತ್ನಿಯ, ತಂದೆತಾಯಂದಿರ ಮತ್ತು ಇತರ ಸಂಬಂಧಿಕರನ್ನು ಅಲ್ಲಾಹನೇ ಸಂರಕ್ಷಿಸಲಿ ಮತ್ತು ಸಹಾಯಿಸಲಿ. ಮುಗ್ಧ ಮಕ್ಕಳ ಮುಂದೆ ತಂದೆಯನ್ನು ಶಹೀದ್ ಮಾಡಲಾಯಿತು. ಅವರ ಹೃದಯಗಳ ಅವಸ್ಥೆ ಮತ್ತು ಭಾವನೆಗಳು ಏನಾಗಿರಬಹುದು ಎಂದು ಅಲ್ಲಾಹನೇ ಬಲ್ಲನು. ಹಿರಿಯ ಮಗನು ಇದನ್ನು ಕಂಡು ಈಗ ಸಂಪೂರ್ಣವಾಗಿ ಮೌನಿಯಾಗಿರುವರು. ಮಾತನಾಡುತ್ತಿಲ್ಲ. ಅಲ್ಲಾಹನೇ ಅವರಿಗೆ ಸಹನೆ ಮತ್ತು ಸಮಾಧಾನವನ್ನು ನೀಡಲಿ. ಅಲ್ಲಾಹನು ಆ ಮಕ್ಕಳ ಕೂಡ ಸಂರಕ್ಷಣೆ ಮಾಡಲಿ. ಶತ್ರುಗಳಿಗೆ ಅವರು ಮಾಡಿದ ಕೆಲಸಕ್ಕೆ ತಕ್ಕುದಾದ ಶಿಕ್ಷೆ ನೀಡಲಿ.

ಎರಡನೇ ಜನಾಝ ಫೈಸಲಾಬಾದಿನ ಶೇಖ್ ಸಊದುಲ್ಲಾಹ್‌ರ ಮಗನಾದ ಝುಲ್‌ಫಿಕಾರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಅವರು ಆಧರ್‌ಬಾಇಜಾನಿಗೆ ಹೋಗಿದ್ದರು. ಅಲ್ಲಿಯ ಒಂದು ಹೋಟೆಲಿನಲ್ಲಿ

ಹೃದಯಾಘಾತ ನಿಮಿತ್ತ 36ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರ ತಂದೆಯಾದ ಹಝ್ರತ್ ರಹ್ಮತುಲ್ಲಾಹ್ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾಗಿದ್ದರು ಮತ್ತು ಸಹಾಬಿಯಾದ ಶೇಖ್ ಚಂಡಾ ಸಾಹಿಬ್‌ರ ಮಗನೂ ಆಗಿದ್ದರು. ಖಾದಿಯಾನಿನ ಮಸ್ಜಿದ್ ಮುಬಾರಕಿನ ಸಮೀಪ ಹಝ್ರತ್ ಶೇಖ್ ರಹ್ಮತುಲ್ಲಾಹ್ ಸಾಹಿಬ್‌ರ ಅಂಗಡಿಯಿತ್ತು. ಬೈಅತ್ ಮಾಡಿದ ನಂತರ ಅವರು ಖಾದಿಯಾನಿನ ಸಮೀಪ ಗ್ರಾಮವಾದ ತೌಕಲ್‌ವಾಲದಿಂದ ಹಿಜ್ರತ್ ಮಾಡಿ ಖಾದಿಯಾನಿಗೆ ಬಂದಿದ್ದರು.

ಮಸೀದಿಯ ಸಮೀಪ ಅಂಗಡಿ ಇರಬಾರದು ಎಂದು ಒಬ್ಬರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಡನೆ ದೂರಿನ ರೀತಿಯಲ್ಲಿ ಹೇಳಿದರು. ಹಝ್ರತ್ ಮೌಲವಿ ಸಾಹಿಬ್ ಈ ದೂರಿನ ಪ್ರಸ್ತಾಪ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಮಾಡಿದಾಗ ಅವರು ಹೇಳಿದರು: ಇವರು ಅಸ್‌ಹಾಬುಸ್ಸುಫ್ಫ ಆಗಿರುವರು. ಎಂದರೆ, ಮಸೀದಿಯಲ್ಲೇ ಇರುವವರಾಗಿರುವರು.

(ಅಸ್ಹಾಬೆ ಅಹ್ಮದ್, ಸಂಪುಟ–10, ಪುಟ–187–189)

ಇಂತಹ ಜನರಿಗೆ ಅಲ್ಲಾಹನು ಎಂತಹ ಸೌಕರ್ಯಗಳನ್ನು ಅನಂತರ ಕೊಟ್ಟನು ಎಂದರೆ, ಅವರ ಕುಟುಂಬವನ್ನು ಸಾಂಪತ್ತಿಕವಾಗಿ ವೃದ್ಧಿಗೊಳಿಸಿದನು. ದಿವಂಗತ ಝುಲ್‌ಫಿಕಾರ್ ಸಾಹಿಬ್‌ರು 2005ರಲ್ಲಿ ಮಾನ್‌ಚಸರ್ ಯೂನಿವರ್ಸಿಟಿಯಿಂದ ಟೆಕ್ನಿಕಲ್ ಫೀಲ್ಡಿನಲ್ಲಿ ಬಿ.ಎಸ್. ಆನರಿನ ಡಿಗ್ರಿ ಪಡೆದರು. ಅನಂತರ ಕುಟುಂಬದ ವ್ಯಾಪಾರವನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದರು. ಲೌಕಿಕವಾದ ಶ್ರೀಮಂತರಾಗಿದ್ದರು ಬಹಳ ವಿನಯವಂತಿಕೆಯನ್ನು ಹೊಂದಿದ್ದರು. ಎಲ್ಲ ವಿಭಾಗದ ಜನರೊಂದಿಗೆ ಸಂಬಂಧವಿರಿಸಿಕೊಂಡಿದ್ದರು. ಪ್ರತಿಯೊಬ್ಬರೊಂದಿಗೂ ಅತ್ಯಂತ ಗೌರವಾದರದಿಂದ ವರ್ತಿಸುತ್ತಿದ್ದರು. ತನ್ನ ಸ್ನೇಹಿತ ಮತ್ತು ಸಹೋದರರಂತೆ ಪ್ರತಿಯೊಬ್ಬರೊಡನೆ ವರ್ತಿಸುತ್ತಿದ್ದರು. ತನ್ನ ಉದ್ಯೋಗಿಗಳ ಬಗ್ಗೆಯೂ ಬಹಳ ಕಾಳಜಿ ವಹಿಸುತ್ತಿದ್ದರು. ಅವರೊಂದಿಗೆ ಬಹಳ ಸಹಾನುಭೂತಿ ತೋರಿಸುತ್ತಿದ್ದರು. ದಾನಧರ್ಮಗಳಲ್ಲಿ ಬಹಳ ಮುಂದಿರುತ್ತಿದ್ದರು. ಜಮಾಅತಿನ ಎಲ್ಲ ಚಂದಾಗಳಲ್ಲಿ ಭಾಗಿಯಾಗಿದ್ದರು. ಅವರಿಂದ ಚಂದಾವನ್ನು ಪಡೆದುಕೊಳ್ಳಲು ಸೆಕ್ರೆಟರಿ ಮಾಲ್‌ರಿಗೆ ನೆನಪಿಸಿಕೊಡುತ್ತಿದ್ದರು. ಹ್ಯೂಮಾನಿಟಿ ಫಸ್ಟಿನ ಪ್ರಾಜೆಕ್ಟಿನಲ್ಲಿ ಅವರು ಹೆಚ್ಚಾಗಿ ಭಾಗಿಯಾಗುತ್ತಿದ್ದರು. ಜನರಿಗೆ ಮನೆಗಳನ್ನು ಮಾಡಿಕೊಡುತ್ತಿದ್ದರು, ಬಡವರ ವಿವಾಹ ಮಾಡಿಸಿಕೊಡುತ್ತಿದ್ದರು. ಭೇಟಿಯಾಗುವ ಜನರಿಂದ ಉತ್ತಮ ಸಂಗತಿಗಳನ್ನು ಕಲಿಯಲು ಪ್ರಯತ್ನಿಸುತ್ತಿದ್ದರು. ಕಲಿತ ಉತ್ತಮ ಸಂಗತಿಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ರಮಝಾನಿನಲ್ಲಿ ವಿಶೇಷವಾಗಿ ಬಹಳ ಸೃಷ್ಟಿ ಸೇವೆ ಮಾಡುತ್ತಿದ್ದರು. ದಿವಂಗತ ಝುಲ್ಫಿಕಾರ್ ಮತ್ತು ಅವರ ತಂದೆತಾಯಂದಿರು ಸೇರಿಕೊಂಡು ಬೇಲೀಸ್‌ನಲ್ಲಿ ಒಂದು ಮಸೀದಿಯನ್ನು ಕೂಡ ನಿರ್ಮಿಸಿದ್ದರು. ಇದು ಬಹಳ ದೊಡ್ಡದಾದ ಒಂದು ಪ್ರಾಜೆಕ್ಟ್ ಆಗಿತ್ತು. ಅಲ್ಲಾಹನ ಅನುಗ್ರಹದಿಂದ ಬಹಳ ದೊಡ್ಡ ಸುಂದರವಾದ ಒಂದು ಮಸೀದಿ ಅಲ್ಲಿ ನಿರ್ಮಿಸಲಾಗಿದೆ. ನಮಾಝಿಗಾಗಿಯೂ ಅವರು ತನ್ನ ಕೆಲಸವನ್ನು ನಿಲ್ಲಿಸಿ ಅದಕ್ಕಾಗಿ ಸಮಯ ಕಂಡುಕೊಳ್ಳುತ್ತಿದ್ದರು. ಪವಿತ್ರ ಖುರ್‌ಆನ್ ದಿನಾಲೂ ಪಾರಾಯಣ ಮಾಡುತ್ತಿದ್ದರು. ತನ್ನ ಜೀವಿತವನ್ನು ಅವರು ಕ್ರಮಗೊಳಿಸಿದ್ದರು. ಮಸೀದಿಗೆ ಹೋಗುವುದರ ಮೇಲೆ ನಿರ್ಬಂಧ ಹೇರಲಾದಾಗ ಮನೆಯಲ್ಲಿ ಜಮಾಅತಾದ ನಮಾಝಿನ ವ್ಯವಸ್ಥೆ ಮಾಡಿಕೊಂಡಿದ್ದರು. ಅವರು ಮಲೇಶ್ಯಗೆ ಸ್ವಲ್ಪ ಸಮಯಕ್ಕೆ ಹೋಗಿದ್ದರು. ಅಲ್ಲಿ ಜಮಾಅತಿನ ಸದಸ್ಯರನ್ನು ಪೋಲೀಸರು ಬಂಧಿಸಿದಾಗ ಇವರಿಗೂ ಅಲ್ಲಾಹನ ಮಾರ್ಗದಲ್ಲಿ ಜೈಲುವಾಸ ಮಾಡಲು ಸೌಭಾಗ್ಯ ಲಭಿಸಿತು. ದಿವಂಗತರು ತನ್ನ ಪತ್ನಿ ಮತ್ತು ಮಕ್ಕಳನ್ನಲ್ಲದೇ ತಂದೆತಾಯಂದಿರು, ಐವರು ಸಹೋದರರು, ಮತ್ತು ಒಬ್ಬಳು ಸಹೋದರಿಯನ್ನು ಅಗಲಿರುವರು. ಅವರ ತಾಯಿಯಾದ ಆಸಿಫ ಸಈದ್ ಸಾಹಿಬರು ಫೈಸಲಾಬಾದ್ ಜಿಲ್ಲೆಯ ಲಜ್ನಾ ಸದರ್ ಆಗಿರುವರು. ಅಲ್ಲಾಹನು ಅವರೆಲ್ಲರಿಗೂ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ.

ಡಾಕ್ಟರ್ ಹಾಮಿದ್ ಮಹ್ಮೂದ್ ಸಾಹಿಬ್ ಅವರ ಕುರಿತು ಬರೆಯುತ್ತಾರೆ: ದಿವಂಗತರಿಗೆ ಅಹ್ಮದಿಯ್ಯತ್, ಖಿಲಾಫತಿನೊಂದಿಗೆ ಪ್ರೀತಿಯ ಸಂಬಂಧವಿತ್ತು. ತನ್ನ ಸಾಮಾಜಿಕ, ರಾಜಕೀಯ ಮತ್ತು ಆಡಳಿತ ಸಂಬಂಧಗಳ ಕಾರಣದಿಂದ ಜನರನ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದರು. ಸಹಾಯದ ಆವಶ್ಯಕತೆಯಿರುವವರ ಸೇವೆ ಸಲ್ಲಿಸುವುದನ್ನು ತನ್ನ ಕಡ್ಡಾಯ ಕರ್ತವ್ಯವೆಂದು ಭಾವಿಸುತ್ತಿದ್ದರು. ಯಾರನ್ನಾದರೂ ಕಷ್ಟತೆಗಳಲ್ಲಿ ಕಂಡರೆ ಮೌನವಾಗಿ ಅವರ ಸಹಾಯ ಮಾಡುವುದನ್ನು ತನ್ನ ಕರ್ತವ್ಯವೆಂದು ಭಾವಿಸುತ್ತಿದ್ದರು. ಅತ್ಯಂತ ರಹಸ್ಯವಾಗಿ ಮತ್ತು ತೋರಿಕೆ ಏನೂ ಇಲ್ಲದೇ ಈ ಕೆಲಸವನ್ನು ಮಾಡಲು ಪ್ರಯತ್ನಿಸುತ್ತಿದ್ದರು.

ಡಾಕ್ಟರ್ ಮಸ್‌ಊದುಲ್ ಹಸನ್ ನೂರಿ ಸಾಹಿಬ್‌ರು ಹೇಳುತ್ತಾರೆ: ಝುಲ್‌ಫಿಕಾರ್ ಬಹಳ ಸಾತ್ವಿಕ, ಸಭ್ಯ ಮತ್ತು ನಿಷ್ಠಾವಂತ ಯುವ ಅಹ್ಮದಿಯಾಗಿದ್ದರು. ನಾನು ಅವರನ್ನು ಪರಿಚಯಪಟ್ಟ ಅಂದಿನಿಂದಲೇ ಅವರ ಈ ಸ್ವಭಾವಗುಣಗಳನ್ನು ಚೆನ್ನಾಗಿ ತಿಳಿದುಕೊಂಡೆನು. ಹ್ಯೂಮಾನಿಟಿ ಫಸ್ಟಿನ ಯೋಜನೆಗಳಲ್ಲಿ ಉತ್ಸಾಹದಿಂದ ಸಾಂಪತ್ತಿಕ ತ್ಯಾಗಗಳನ್ನು ಮಾಡುತ್ತಿದ್ದರು. ತ್ಯಾಗದ ಆವೇಶ ಮತ್ತು ಉದಾರತೆಯ ಮಟ್ಟ ಬಹಳ ಉನ್ನತ ಮಟ್ಟದ್ದಾಗಿತ್ತು. ಅನೇಕ ಲಕ್ಷಗಟ್ಟಲೆ ರೂಪಾಯಿಗಳನ್ನು ದಾನ ಮಾಡುತ್ತಿದ್ದರು. ಅದರೊಂದಿಗೆ ಬಹಳ ವಿನಯವಂತಿಕೆ ತೋರಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ತಂದೆತಾಯಂದಿರಿಗೂ ಪತ್ನಿಗೂ ತಾಳ್ಮೆ ಮತ್ತು ಧೈರ್ಯ ದಯಪಾಲಿಸಲಿ. ಅಲ್ಲಾಹನು ಅವರ ಮಕ್ಕಳ ಸ್ವತಃ ಸಂರಕ್ಷಣೆ ಮಾಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮೂರನೇ ಪ್ರಸ್ತಾಪ ಕೆನಡದ ಸನ್ಮಾನ್ಯ ಮಲಿಕ್ ತಬಸ್ಸುಂ ಮಖ್ಸೂದ್ ಸಾಹಿಬ್‌ರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆಯಾದ ಮಲಿಕ್ ಮಖ್‌ಸೂದ್ ಅಹ್ಮದ್ ಸಾಹಿಬ್‌ರು ಮೇ 28, 2010ರಲ್ಲಿ ದಾರುಧ್ಧಿಕ್ರ್ ಲಾಹೋರಿನಲ್ಲಿ ನಡೆದ ದಾಳಿಯಲ್ಲಿ ಶಹೀದ್ ಆಗಿದ್ದರು. ತಂದೆಯಾದ ಮಲಿಕ್ ಮಖ್‌ಸೂದ್ ಅಹ್ಮದ್ ಶಹೀದ್ ಸಾಹಿಬ್‌ರ ತಾತರಾದ ಹಝ್ರತ್ ಮಲಿಕ್ ಅಲಿ ಬಕ್ಷ್ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಲೆಕ್ಚರ್ ಸಿಯಾಲ್‌ಕೋಟ್ ಆಲಿಸಿ ಬೈಅತ್ ಮಾಡಿದ್ದರು. ಮಲಿಕ್ ತಬಸ್ಸುಂ ಮಖ್‌ಸೂದ್ ಸಾಹಿಬ್‌ರು 1991ರಲ್ಲಿ ತನ್ನ ಜೀವಿತವನ್ನು ವಖ್ಫ್ ಮಾಡಿದ್ದರು. 2006ರಲ್ಲಿ ಅವರ ಡ್ಯೂಟಿ ನಝ್ಝಾರತ್ ಉಮೂರೆ ಆಮ್ಮದಲ್ಲಿ ಇತ್ತು. ಅಲ್ಲಿ ಅವರು ನಾಇಬ್ ನಾಝಿರ್ ಉಮೂರೆ ಆಮ್ಮ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 2011ರಲ್ಲಿ ತಹ್ರೀಕ್ ಜದೀದಿನ ಕಾನೂನು ಸಲಹೆಗಾರರಾಗಿ ಅವರನ್ನು ನಿಶ್ಚಯಿಸಲಾಗಿತ್ತು. 2016ರಲ್ಲಿ ನನ್ನ ಅನುಮತಿಯಿಂದ ಪುನಃ ಕೆನಡಗೆ ಶಹೀದ್‌ರ ಕುಟುಂಬದೊಂದಿಗೆ ಹೋದರು. ಮೊದಲು ಹೋಗಲು ಅವರು ಬಯಸುತ್ತಿರಲಿಲ್ಲ. ಅನಂತರ ನಾನು ಹೇಳಿದಾಗ ಹೋದರು. ಕೆನಡದಲ್ಲೂ ಅವರು ಉಮೂರೆ ಆಮ್ಮ ಮತ್ತು ಜಾಇದಾದಿನ ವಿಭಾಗಗಳಲ್ಲಿ ಸೇವೆ ಸಲ್ಲಿಸುವುದರೊಂದಿಗೆ ನಾಝಿಂ ದಾರುಲ್ ಖಝಾ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ದಿವಂಗತರು ನಮಾಝ್, ಉಪವಾಸವನ್ನು ಪಾಲಿಸುವವರೂ ತಹಜ್ಜುದ್ ನಮಾಝ್ ನಿಯತವಾಗಿ ನಿರ್ವಹಿಸುವವರೂ, ಪವಿತ್ರ ಖುರ್‌ಆನಿನೊಂದಿಗೆ ಆಳವಾದ ಸಂಬಂಧವನ್ನು ಹೊಂದಿದವರೂ ಆಗಿದ್ದರು. ಖಿಲಾಫತಿನೊಂದಿಗೆ ಆಳವಾದ ಸಂಬಂಧ ಮತ್ತು ಖಲೀಫರ ಮಾತಿಗೆ ಓಗೋಡುವವರೂ ಆಗಿದ್ದರು. ಬಹಳ ಸಾತ್ವಿಕ ಮತ್ತು ಸಹಾನುಭೂತಿ ಹೊಂದಿರುವರ ವ್ಯಕ್ತಿಯಾಗಿದ್ದರು. ದಿವಂಗತರು ತಾಯಿಯನ್ನಲ್ಲದೇ ಪತ್ನಿ, ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರ ಏಕ ಮಗನಾದ ಡಾಕ್ಟರ್ ಅತ್‌ಹರ್ ವಖ್ಫೇ ಝಿಂದಗಿಯಾಗಿರುವರು. ಅವರ ಅಳಿಯನಾದ ಉಮರ್ ಫಾರೂಖ್ ಸಾಹಿಬ್‌ರು ಕೂಡ ಮುರಬ್ಬಿ ಆಗಿರುವರು. ಅವರು ಲಾಹೋರ್ ಜಿಲ್ಲೆಯ ಅಮೀರ್ ಆಗಿದ್ದ ಮಲಿಕ್ ತಾಹಿರ್ ಅಹ್ಮದ್ ಸಾಹಿಬ್‌ರ ಸಹೋದರಿ ಪುತ್ರರಾಗಿದ್ದರು.

ಅವರ ಮಗಳು ಬರೆಯುತ್ತಾಳೆ: ತಂದೆಗೆ ತಬ್ಲೀಗ್ ಮಾಡುವ ಬಹಳ ಆಸಕ್ತಿ ಇತ್ತು. ರಾತ್ರಿ ಸಮಯದಲ್ಲಿ ತಬ್ಲೀಗ್ ಮಾಡಲು ಹೊರಟರು. ಅಲ್ಲಿ ಹುಡುಗರು ಅವರ ಮೇಲೆ ಹಲ್ಲೆ ನಡೆಸಿದರು. ಹೇಗಿದ್ದರು ಅಲ್ಲಿಂದ ಸುರಕ್ಷಿತರಾಗಿ ಬಂದರು. ಆದರೆ ಜಗಳದಲ್ಲಿ ಒಂದು ಹೊಡೆತ ಅವರ ಕಣ್ಣಿಗೆ ತಗುಲಿತು. ಕಣ್ಣು ಗಾಯಾಳಾಯಿತು. ಬಹಳ ಕಷ್ಟಪಟ್ಟು ಮನೆಗೆ ತಲುಪಿದರು. ಆದರೆ ಯಾರೊಡನೆಯೂ ಹೇಳಲಿಲ್ಲ. ಅನೇಕ ವರ್ಷಗಳ ನಂತರ ಪುನಃ ಕಣ್ಣು ನೋವು ಆಗಲು ಶುರುವಾದಾಗ ಡಾಕ್ಟರ್‌ಗೆ ತೋರಿಸಲಾಯಿತು. ಇದು ಹಳೆಯ ಗಾಯದ ಪರಿಣಾಮವೆಂದು ಡಾಕ್ಟರ್ ಹೇಳಿದರು. ಆಗ ಇಂತಹ ಒಂದು ಘಟನೆ ನಡೆದಿತ್ತು ಎಂದು ಅವರು ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶವನ್ನು ತಲುಪಿಸಿದ ಕಾರಣದಿಂದ ಉಂಟಾದ ಕಣ್ಣು ನೋವು ಎಂಬ ಕಾರಣದಿಂದ ಅವರು ಸಂತೋಷದಲ್ಲಿದ್ದರು.

ಮಲಿಕ್ ತಾಹಿರ್ ಸಾಹಿಬ್ ಬರೆಯುತ್ತಾರೆ: ತಬಸ್ಸುಂ ಮಖ್ಸೂದ್‌ರಿಗೆ ಚಿಕ್ಕಂದಿನಿಂದಲೇ ಒಳಿತಿನ ಕಡೆಗೆ ಒಲವು ಇತ್ತು. ಶಾಖಾ ಸಂಘಟನೆಗಳ ಮತ್ತು ಜಮಾಅತಿನ ವ್ಯವಸ್ಥೆಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಖಿಲಾಫತಿನೊಂದಿಗೆ ಆಳವಾದ ಸಂಬಂಧ ಮತ್ತು ಜಮಾಅತಿನ ವ್ಯವಸ್ಥೆಯೊಂದಿಗೆ ಅನುಸರಣೆ ಅವರ ಗುಣವಾಗಿತ್ತು. ಅತ್ಯಂತ ವಿನಯವಂತರೂ ಅಲ್ಲಾಹನ ಮೇಲೆ ಭರವಸೆ ಹೊಂದಿದವರೂ ಆಗಿದ್ದರು. ಮಕ್ಕಳ ಅತ್ಯಂತ ಉನ್ನತ ಮಟ್ಟದ ತರಬೇತಿ ಮಾಡಿದರು. ಅವರನ್ನು ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯೊಂದಿಗೆ ಸುದೃಢವಾದ ಸಂಬಂಧವನ್ನು ಉಂಟುಮಾಡಲು ಬಹಳಷ್ಟು ಪ್ರಯತ್ನಿಸಿದರು.

ನಾಇಬ್ ವಕೀಲುಲ್ ಮಾಲ್ ಸಾನಿ ಹಾಫಿಝ್ ಮುಹಮ್ಮದ್ ಅಕ್ರಂ ಖುರೈಶಿ ಸಾಹಿಬ್ ಹೇಳುತ್ತಾರೆ: ನನಗೆ ಅವರೊಂದಿಗೆ ಬಹಳ ಹಿಂದಿನಿಂದಲೇ ಸಂಬಂಧವಿದೆ. ನೆರೆಕರೆಯವರೂ ಆಗಿದ್ದರು. ಬಹಳ ನಿಷ್ಠಾವಂತ, ಪ್ರಾಮಾಣಿಕ, ಸಹಾನುಭೂತಿ ಹೊಂದಿದ್ದ ಮತ್ತು ಖಿಲಾಫತಿನ ಪ್ರೇಮಿಯಾಗಿದ್ದ ವ್ಯಕ್ತಿಯಾಗಿದ್ದರು. ಅಲ್ಲಾಹನ ಮೇಲೆ ಅವರಿಗೆ ಪರಿಪೂರ್ಣವಾದ ವಿಶ್ವಾಸವಿತ್ತು. ಅವರು ಒಮ್ಮೆ ಒಬ್ಬ ವ್ಯಕ್ತಿಗೆ ಅಲ್ಲಾಹನ ಬಗ್ಗೆ ಪರಿಜ್ಞಾನದ ಬಗ್ಗೆ ಮನವರಿಕೆ ಮಾಡಿಸುತ್ತಿದ್ದರು. ಅಲ್ಲಾಹನ ಪ್ರೀತಿ ಮತ್ತು ವೈಭವದ ಕಾರಣದಿಂದ ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿರುವುದಾಗಿ ನಾನು ಕಂಡೆನು. ಅವರೊಂದಿಗೆ ಕೆಲಸ ಮಾಡುತ್ತಿದ್ದ ಒಬ್ಬ ಉದ್ಯೋಗಿಯೊಂದಿಗೆ ಅವರು ಹೇಳಿದ ಮಾತುಗಳನ್ನು ಆ ಉದ್ಯೋಗಿ ಹೇಳಿದ್ದರು. ಅವರು ಹೀಗೆ ಆ ಉದ್ಯೋಗಿಯೊಡನೆ ಹೇಳಿದ್ದರು: ನನ್ನ ಉಪದೇಶವೇನೆಂದರೆ, ಯಾರೂ ಏನು ಮಾಡುತ್ತಿದ್ದಾರೆ ಮತ್ತು ಏನೂ ಹೇಳುತ್ತಿದ್ದಾರೆ ಎಂದು ನೀನು ನೋಡಬೇಡ. ಕೇವಲ ತನ್ನ ವಿಶ್ವಾಸವನ್ನು ಸಂರಕ್ಷಿಸು. ಖಿಲಾಫತಿನ ಸೆರಗನ್ನು ಬಿಡಬೇಡ. ಅದರ ಹೊರತು ಬೇರೆಲ್ಲೂ ನೆಮ್ಮದಿಯಿಲ್ಲ. ಖುದ್ದಾಮುಲ್ ಅಹ್ಮದಿಯದಲ್ಲಿ ಇದ್ದ ಕಾಲದಿಂದಲೇ ಜಮಾಅತಿನೊಂದಿಗೆ ಅತ್ಯಂತ ಆಳವಾದ ಸಂಬಂಧ ಹೊಂದಿದ್ದರು. ಮತ್ತು ತನ್ನ ಜೀವ, ಸಂಪತ್ತು, ಸಮಯ ಹಾಗೂ ಗೌರವ ತ್ಯಾಗ ಮಾಡುತ್ತಾ ಸದಾ ಮುಂದಿರುತ್ತಿದ್ದರು. ಬಹಳ ಚುರುಕಾದ ಯುವಕರಾಗಿದ್ದರು. ಬಹಳ ಜಾಗರೂಕರಾಗಿದ್ದರು. ಸುದೃಢವಾದ ಉದ್ದ ಮೈಕಟ್ಟನ್ನು ಹೊಂದಿದ್ದರು. ಕ್ರೀಡಾಪಟು ಆಗಿದ್ದರು. ತನ್ನ ಎಲ್ಲ ಸಾಮರ್ಥ್ಯಗಳನ್ನು ಜಮಾಅತಿನ ಸೇವೆಗಳಿಗಾಗಿ ಖರ್ಚು ಮಾಡುತ್ತಿದ್ದರು. ಕಿರಿವಯಸ್ಸಿನಲ್ಲೇ ಸುಪ್ರೀಂ ಕೋರ್ಟಿನ ಪ್ರಾಕ್ಟೀಸಿನ ಲೈಸನ್ಸ್ ಕೂಡ ಅವರಿಗೆ ಲಭಿಸಿತ್ತು. ಅನೇಕ ವಿಧದ ಕೆಲಸಗಳನ್ನು ಮಾಡುವ ಅಸಾಧಾರಣವಾದ ಅನುಭವ ಮತ್ತು ಸಾಮರ್ಥ್ಯವನ್ನು ಹೊಂದಿದ್ದರು. ಲೋಕ ಸಂಚಾರ ಸಹ ಮಾಡುತ್ತಿದ್ದರು. ಕೇವಲ ತನ್ನಷ್ಟಕ್ಕೆ ಇರಲಿಲ್ಲ. ಆದರೆ ಸದಾ ವಿನಯದಿಂದ ಇರುತ್ತಿದ್ದರು. ಎಂದಿಗೂ ಅಹಂಭಾವ ತೋರಿಸುತ್ತಿರಲಿಲ್ಲ.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಂದ ಹಾಗೆ ನಬಿ ಆಧ್ಯಾತ್ಮಿಕ ಜ್ಞಾನ ಹೊಂದಿದ ಕಾರಣ ಅವರು ತನ್ನ ಸ್ಥಿತಿ ತಿಳಿದಿರುತ್ತಾನೆ. ಮತ್ತು ನಾನು ಮಾಡುತ್ತಿರುವುದೆಲ್ಲ ನಾನಲ್ಲ. ಅಲ್ಲಾಹನೇ ಮಾಡುತ್ತಿದ್ದಾನೆ ಎಂಬ ಅರಿವು ಅವರಿಗಿರುತ್ತದೆ. ಆದುದರಿಂದ ಅವರು ಪ್ರಾರ್ಥಿಸುತ್ತಾರೆ. ಓ ಅಲ್ಲಾಹನೇ ನನ್ನ ಅಸ್ತಿತ್ವವನ್ನು ಆದಷ್ಟು ಮಟ್ಟಿಗೆ ಗೌಪ್ಯವಾಗಿಡು ಮತ್ತು ತನ್ನ ಅಸ್ತಿತ್ವವನ್ನು ಬಹಿರಂಗಪಡಿಸು. ಅಂದರೆ ಈ ಸ್ವರೂಪದಲ್ಲಿ "ಇಗ್‌ಫಿರ್‌ಲಿ" ಅರ್ಥ ಓ ಅಲ್ಲಾಹ್ ನಿನಗೆ ನನ್ನ ಪ್ರೀತಿಯ ಕಾರಣ ಒಡ್ಡಿ ಬೇಡಿಕೊಳ್ಳುತ್ತಿದ್ದೇನೆ. ನನ್ನ ಮೇಲೆ ನಿನ್ನ ಅನುಗ್ರಹವಿರಲಿ. ಅಂದರೆ ನನ್ನ ಅಸ್ತಿತ್ವ ಅಳಿಸಿ ನಿನ್ನ ಅಸ್ತಿತ್ವ ನನ್ನ ಮೂಲಕ ಜಾಹೀರುಪಡಿಸು. ಹಾಗೆ ಸ್ಪಷ್ಟವಿದೆ ಒಬ್ಬ ದಾಸನ ಮೂಲಕ ಎಷ್ಟರಮಟ್ಟಿಗೆ ಅಲ್ಲಾಹನ ಅಸ್ತಿತ್ವ ಪ್ರಕಟಪಡುವುದು ಅಷ್ಟೇ ಅವನಿಗೆ ಅವನ ಸತ್ಕಾರ್ಯಗಳಲ್ಲಿ ಯಶಸ್ಸು ದೊರೆಯುತ್ತದೆ.

ಹೌದು ಅದೇ ಪದ ಇತರರಿಗೆ ಉಪಯೋಗಿಸುವಾಗ ಅವರವರ ಅಂತಸ್ತಿನ ಮೇರೆಗೆ ಆ ಪದದ ಅರ್ಥ ಅನ್ವಯವಾಗುತ್ತದೆ. ಒಬ್ಬ ಉನ್ನತ ದರ್ಜೆಯ ಸತ್ಯವಿಶ್ವಾಸಿಯು ಈ ಪದ ಉಪಯೋಗಿಸಿದರೆ ಅದರ ಅರ್ಥ ಆಧ್ಯಾತ್ಮಿಕ ಉನ್ನತಿಯಲ್ಲಿ ತೊಡಕುವುಂಟು ಆಗುವಂತಹ ಕಾಯ್ದಳಿಂದ ನನ್ನನ್ನೂ ರಕ್ಷಿಸು ಎಂದಾಗುತ್ತದೆ. ಮಧ್ಯಮ ದರ್ಜೆಯ ಸತ್ಯವಿಶ್ವಾಸಿ ಈ ಪದ ಉಪಯೋಗಿಸಿದರೆ ಅದರ ಅರ್ಥ. ನನ್ನ ತಪ್ಪುಗಳನ್ನು ಕ್ಷಮಿಸಿ ಉನ್ನತ ದರ್ಜೆಗೆ ಮಾರ್ಗದರ್ಶನ ನೀಡು ಎಂದಾಗುತ್ತದೆ. ಹಾಗೆಯೇ ಸಾಮಾನ್ಯ ಸತ್ಯವಿಶ್ವಾಸಿ ಈ ಪದ ಉಪಯೋಗಿಸಿದರೆ ಅದರ ಅರ್ಥ. ನನಗೆ ಸತ್ಕಾರ್ಯಗಳಲಿ ಸ್ಥಿರತೆ ನೀಡು. ನನ್ನ ಪಾಪಗಳು ನನ್ನನ್ನು ಮುಳುಗಿಸದಿರಲಿ. ಒಬ್ಬ ಸತ್ಯಾನುವೇಷಕನು ಈ ಪದ ಬಳಸಿದರೆ ಅದರ ಅರ್ಥ, ನನ್ನ ಪಾಪಗಳು ನನಗೆ ಮಾರ್ಗದರ್ಶನ ಪಡೆಯುವುದಕ್ಕೆ ಅಡ್ಡಿ ಬಾರದಿರಲಿ. ಆದುದರಿಂದ ನನ್ನ ಪಾಪಗಳನ್ನು ಕ್ಷಮಿಸು. ಹಾಗೆ ಈ ಪದದ ಬಳಕೆ ವಿವಿಧ ಸಂದರ್ಭಗಳನ್ನು ಒಳಗೊಂಡಂತೆ ಹೇಗಿದೆ ಎಂದರೆ ಉದಾಹರಣೆಗೆ **"ಜಬ್ಬಾರ್"** ಪದ ಅಲ್ಲಾಹನಿಗಾಗಿ ಉಪಯೋಗವಾದರೆ ಅದರ ಅರ್ಥ ಸುಧಾರಕ ಎಂದಾಗುತ್ತದೆ. ಅದೇ ಪದ ಅವನ ದಾಸರಿಗೆ ಉಪಯೋಗಿಸಲ್ಪಟ್ಟರೆ ಅದರ ಅರ್ಥ ವಿದ್ರೋಹಿ, ಕಾನೂನು ವಂಚಕ ಎಂದಾಗುತ್ತದೆ. ನೆನಪಿಡಿರಿ. ಅಲ್ಲಾಹನು ತನ್ನ ಸಂದೇಶವಾಹಕರ ಬಗ್ಗೆ ಹೇಳುವನು. **ಅಲ್ಲಾಹು ಎಜ್‌ತಬಿ ಮಿನ್ ರುಸುಲಿಹಿ.** ಅಲ್ಲಾಹನು ಅವರನ್ನು ಆಯ್ದುಕೊಂಡ ಮೇಲೆ ಅವರಲ್ಲಿ ಪಾಪಗಳು ಇರಲು ಹೇಗೆ ಸಾಧ್ಯ? ಅವರನ್ನು ಇಹಲೋಕದಿಂದ ಬೇರ್ಪಡಿಸಿ ಅಲ್ಲಾಹನ ಸಾಮೀಪ್ಯ ಒದಗಿಸಿಕೊಟ್ಟಾಗ ಅವರ ಬಳಿ ಶೈತಾನನು ಬರಲು ಹೇಗೆ ಸಾಧ್ಯ? ಶೈತಾನನು ಅಲ್ಲಾಹನ ನಾಮದಿಂದಲೇ ಓಡಿ ಹೋಗುತ್ತಾನೆ. ಅದೇ ರೀತಿ ಇನ್ನೊಂದು ಜಾಗದಲ್ಲಿ ಹೇಳುತ್ತಾನೆ. **"ಇನ್ನ ಇಬಾದಿಲೈಸಾಲಕ ಅಲೈಹಿಂ ಸುಲ್ತಾನ್."** ನಿಸ್ಸಂಶಯವಾಗಿಯೂ ನನ್ನ ದಾಸರ ಮೇಲೆ ನಿನ್ನ ಪ್ರಭಾವ ಆಗದು. ಅಂದಹಾಗೆ ಕೆಳಸ್ತರದ ದಾಸರಿಗೆ ಈ ಕಾನೂನು ಇರುವಾಗ, ಅಲ್ಲಾಹನು ಅವರಿಗೆ ಸಹ ಶೈತಾನನ ಪ್ರಭುತ್ವದಿಂದ ರಕ್ಷಿಸುತ್ತಾನೆ. ಅಂದ ಮೇಲೆ ಪ್ರವಾದಿಗಳಂತೂ ಅಲ್ಲಾಹನ ವಿಶೇಷ ರಕ್ಷಣೆಯಲ್ಲಿರುವವರು ಅವರ ಬಳಿ ಶೈತಾನನು ಹೋಗಲು ಹೇಗೆ ಸಾಧ್ಯ?

**(ತಫ್ಸೀರ್ ಕಬೀರ್, ಸಂಪುಟ–3, ಪುಟ–489, 2010 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮಾರ್ಗದರ್ಶಿಲ್ಪಟ್ಟ ಇಮಾಮರಲ್ಲಿ ಒಬ್ಬರಾಗಿದ್ದರು. ಇಮಾಮ್ ಝೈನುಲ್ ಆಬಿದೀನ್‌ರವರ ಪೀಠಿಯ ಪುತ್ರರು. ಅಲ್ಲದೇ ಹದೀಸಿನ ಪೈಕಿ ಸತ್ಯವಾದಿಗಳು ಹಾಜರಿದ್ದಾರೆ. ಅವರು ಸುಳ್ಳುಗಾರರನ್ನು ಮತ್ತು ಅವರ ಸುಳ್ಳನ್ನೂ ಗುರುತಿಸುವವರಾಗಿದ್ದರು. ಅವರು ಅವಸರವಾದಿಗಳಾಗಿರಲಿಲ್ಲ. ಅವರು ಆ ಹದೀಸನ್ನು ಸುಳ್ಳೆಂದು ತಿಳಿದು ಸತ್ಯವೆಂದು ಸೇರಿಸಲು ಸಾಧ್ಯವಿರಲಿಲ್ಲ. ಅದರ ಕೆಲ ವರದಿಗಾರರು ಸುಳ್ಳುಗಾರರು ಮತ್ತು ದಜ್ಜಾಲರು, ಹಾಗಾದರೆ ಅವರು ಸುಳ್ಳುವಾದಿಗಳಿಗೆ ಮತ್ತು ಸತ್ಯವಾದಿಗಳಿಗೆ ಬೆರಕೆ ಮಾಡಿದರೆ, ಅವರು ಯಾರು ಸುಳ್ಳುವಾದಿಗಳು ಮತ್ತು ಯಾರು ಸತ್ಯವಾದಿಗಳು ಎಂದು ತಿಳಿದವರಾಗಿದ್ದರು. ಅದೇ ಸತ್ಯ ಎಂದಾದರೆ ಕೆಟ್ಟದನ್ನು ಒಳ್ಳೆಯದಾಗಿ ತೋರಿಸಿದವರ ಗತಿ ಏನಾಗಬೇಕು? ಅವರು ಸುಳ್ಳುಗಾರರ ಸ್ಥಿತಿ ಚೆನ್ನಾಗಿ ಬಲ್ಲವರಾಗಿದ್ದರು. ಅವರೇನು ನಿನ್ನ ದೃಷ್ಟಿಯಲ್ಲಿ ಸಜ್ಜನರಲ್ಲವೇ? ಬದಲು ಪ್ರಥಮ ದರ್ಜೆಯ ಧಿಕ್ಕಾರಿಯಾಗಿದ್ದಾರೆ, ಅಲ್ಲಾಹನ ಮೇಲೆ ಸುಳ್ಳು ಹೇಳುವವರಿಗಿಂತ ಹೆಚ್ಚು ದುಷ್ಕರ್ಮಿಗಳು ಯಾರಾಗಬಹುದು. ಅಥವಾ ಸುಳ್ಳು ವರದಿಗಾರರನ್ನು ನೆರವಾಗುವರ ನೀನು ಸಾಕ್ಷಿ ವಹಿಸಬಹುದೇ? ದಾರುಖುತುನಿ ಮತ್ತು ಎಲ್ಲ ವರದಿಗಾರರು ಮತ್ತು ಈ ಹದೀಸು ವರದಿ ಮಾಡಿದ ಎಲ್ಲ ಜನರು ಹಿಂದಿನ ಕಾಲದಿಂದ ಹಿಡಿದು ಈ ಕಾಲದವರೆಗಿನ ಎಲ್ಲರೂ ದಿಕ್ಕಾರಿಗಳೇ ಮತ್ತು ಕಪಟ ವಿಶ್ವಾಸಿಗಳೇ ಅದರಲ್ಲಿ ಯಾರೂ ಸಹ ಸಜ್ಜನವಾಗಿರಲಿಲ್ಲವೇ? ಈ ಸಮುದಾಯದ ಗ್ರಂಥಗಳನ್ನು ಈ ಹದೀಸಿನಿಂದ ದೃಢೀಕರಿಸುವನೇ ಅದರ ಹೆಸರು ದುರ್ಬಲ ಎಂದು ಹೇಳುವನೇ. ಅದಾಗ್ಯೂ ಅವರ ಜ್ಞಾನ ನಿನಗಿಂತ ಮತ್ತು ನಿನ್ನ ಸಹಪಾಠಿಗಳಿಗಿಂತ ಹೆಚ್ಚಾಗಿದೆ, ಮತ್ತು ನಿನಗಿಂತ ಹೆಚ್ಚು ವಾಸ್ತವ ತಿಳಿದವರಾಗಿದ್ದಾರೆ. ಅಂದ ಮೇಲೆ ನೀನು ನಿನ್ನ ಮನಃಪೂರ್ವಕ ಮಾತನಾಡು, ಸತ್ಕರ್ಮಿಯಾಗು. ನಿನಗೆ ಈ ಹದಿಸಿನಲ್ಲಿ ಸಂಶಯವೇ. ಆದರೆ ಈ ಹದೀಸು ತನ್ನ ಸತ್ಯತೆ ಸ್ವಯಂ ಜಾಹೀರುಪಡಿಸಿದೆ. ಅದರ ಪರಿಶುದ್ಧತೆ ಜಾಹೀರಾಗಿದೆ. ಅದು ಸಮುದಾಯದ ದೃಷ್ಟಿಯಲ್ಲಿ ದುರ್ಬಲವೇ ಅಥವಾ ಖಂಡನೀಯವೇ ಅಥವಾ ಆ ವರದಿಗಾರರಲ್ಲಿ ಯಾರಾದರೂ ಧಿಕ್ಕರಿಸಲ್ಪಟ್ಟವರಾಗಿದ್ದಾರೆಯೇ? ಇದು ಸಂಶಯಪಡಲು ಯೋಗ್ಯವೇ ಅಥವಾ ನೀನು ಹುಚ್ಚರಲ್ಲಿ ಸೇರಿದವನೇ? ಅಲ್ಲಾಹನು ಈ ಹದೀಸಿನ ಸತ್ಯವನ್ನು ದೃಢೀಕರಿಸಿದೆ ಮತ್ತು ವರದಿಗಾರರಿಗೆ ಅಪಾದನೆಗಳಿಂದ ದೂರ ಮಾಡಿದೆ. ಮತ್ತು ಈ ಹದೀಸಿನ ಸತ್ಯದ ಪ್ರಕಾಶವನ್ನು ಸುಸ್ಪಷ್ಟವಾಗಿ ಜಾಹೀರುಪಡಿಸಿದೆ ಹಾಗೆ ಇಷ್ಟಾದ ನಂತರವೂ ಸಂಶಯ ಉಳಿದಿದೆಯೇ? ನೀವೇನು ಸೂರ್ಯ ನೆತ್ತಿಯ ಮೇಲೆ ಬಂದ ಮೇಲೂ ಸಂಶಯಪಡುವಿರೋ? ನೀವು ಪ್ರಕಾಶವನ್ನು ಅಂಧಕಾರವಾಗಿ ಕಾಣುವಿರೋ? ನೀವೇನು ನಾಮಧಾರಿ ಅಂಧರಾಗಿದ್ದರೋ? ಅಥವಾ ನಿಜವಾಗಿಯೂ ಅಂಧರಾಗಿರುವರೋ? ನೀವು ಮನುಷ್ಯನ ಸಾಕ್ಷಿ ಸ್ವೀಕರಿಸುವಿರೋ? ಮತ್ತು ರಹ್ಮಾನ್‌ರ ಸಾಕ್ಷಿ ಸ್ವೀಕರಿಸುವುದಿಲ್ಲವೇ? ಹದ್ದು ಮೀರಿ ವರ್ತಿಸುವಿರೋ? ಅಲ್ಲಾಹನು ಸುಳ್ಳುಗಾರರಿಗೆ ತನ್ನ ಅದೃಶ್ಯಜ್ಞಾನ ನೀಡುವನು ಎಂದು ನೀನು ನಂಬುವೆಯಾ? ಯಾವುದಾದರು ಸತ್ಯ ಪ್ರಕಟವಾದರೆ ಅದರಲ್ಲಿ ಸಂಶಯಪಡುವಿರೋ? ಕೇವಲ ಹದ್ದು ಮೀರುವವರು ಮಾತ್ರ ಸಂಶಯಪಡುತ್ತಾರೆ. (ನೂರುಲ್ ಹಖ್, ಭಾಗ–2, ರೂಹಾನಿ ಖಝಾಇನ್, ಸಂಪುಟ–8, ಪುಟ–205–208)

**ಹದಿಮೂರು ನೂರು ವರ್ಷಗಳಿಂದ ಅಂದರೆ ಪ್ರಾರಂಭದಿಂದ ಇಲ್ಲಿಯವರೆಗೆ ಯಾರೂ ಸಹ ಆ ಹದೀಸನ್ನು ದುರ್ಬಲ ಎನ್ನಲಿಲ್ಲ.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ವಾಸ್ತವವಾಗಿ ಆದಮರಿಂದ ಹಿಡಿದು ಇಲ್ಲಿಯವರೆಗೆ ಈ ರೀತಿಯ ಭವಿಷ್ಯವಾಣಿ ಯಾರೂ ಮಾಡಲಿಲ್ಲ. ಈ ಭವಿಷ್ಯವಾಣಿ ನಾಲ್ಕು ದಿಕ್ಕು ಹೊಂದಿದೆ. 1) ಅಂದರೆ ಚಂದ್ರಗ್ರಹಣ ಅದರ ನಿಗದಿತ ರಾತ್ರಿಗಳಲ್ಲಿ ಮೊದಲ ರಾತ್ರಿಯಲ್ಲಿ ಆಗುವುದು 2) ಸೂರ್ಯ ಗ್ರಹಣ ಅದರ ನಿಗದಿತ ದಿನಗಳಲ್ಲಿ ಮಧ್ಯ ದಿನದಂದಾಗುವುದು, 3) ಮೂರನೆಯದಾಗಿ ಅದು ರಂಝಾನ್ ತಿಂಗಳಾಗಿರಬೇಕು. 4) ನಾಲ್ಕನೇಯದಾಗಿ ಅದರ ದಾವೆದಾರನು ಉಪಸ್ಥಿತರಾಗಿರಬೇಕು. ಅವನನ್ನು ಸುಳ್ಳಾಗಿಸಿರಬೇಕು. ಅಂತಹ ಭವಿಷ್ಯವಾಣಿಯ ಗೌರವದ ಮೇಲೆ ನಿರಾಕರಣೆಯಾದರೆ ಲೋಕದ ಇತಿಹಾಸದಲ್ಲಿ ಅದರ ಒಂದು ಉದಾಹರಣೆಯಾದರೂ ಪ್ರಸ್ತುತಪಡಿಸಿರಿ. ಎಲ್ಲಿಯವರೆಗೆ ಅದರ ಉದಾಹರಣೆ ದೊರೆಯುವುದಿಲ್ಲ. ಅಲ್ಲಿಯವರೆಗೆ ಈ ಭವಿಷ್ಯವಾಣಿ ಎಲ್ಲ ಭವಿಷ್ಯವಾಣಿಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು ಅದರ ಕುರಿತು ವಚನ **"ಲಾ ಯುಝ್‌ಹಿರು ಅಲಾ ಗೈಬಿಹಿ ಅಹದ"** ವಿಷಯ ಸತ್ಯವಾಗುತ್ತದೆ. ಏಕೆಂದರೆ ಅದರಲ್ಲಿ ವಿವರಿಸಲಾಗಿದೆ. ಆದಮರಿಂದ ಇಲ್ಲಿಯವರೆಗೆ ಅವರ ಆಚರಣೆ ಇಲ್ಲ ಎಂದು. ಆದರೂ ಒಂದು ಹದೀಸು ಇನ್ನೊಂದು ಹದೀಸಿನಿಂದ ಪುಷ್ಟಿಕರಿಸಿ ದೃಢಪಡಿಸುತ್ತದೆ. ಅಂದ ಮೇಲೆ ಯಾವ ಹದೀಸ್ ಅಲ್ಲಾಹನ ಪ್ರಕಾಶದಿಂದ ದೃಡಪಡಿಸಿದೆಯೋ ಅದನ್ನು ದುರ್ಬಲ, ಸುಳ್ಳು ಎಂದು ಹೇಳುವುದು ಅಲ್ಲಾಹನ ಭಯವಿಲ್ಲದವರ ಕಾರ್ಯವಾಗಿದೆ. ಅದರ ಯಥೇಚ್ಛ ವಿವರಣೆ ಮತ್ತು ಹೆಚ್ಚಿನ ಪ್ರಸಿದ್ಧಿಯ ಕಾರಣ ಅದು ಹಝ್‌ರತ್ ರಸೂಲುಲಾಹ್(ಸ) ರವರೆಗೆ ಉನ್ನತಕ್ಕೇರಲಿಲ್ಲ. ಅದರ ಅಗತ್ಯವು ಎಣಿಸಲಿಲ್ಲ. ಆದರೆ ಅಲ್ಲಾಹನು ತನ್ನ ಎರಡು ಸಾಕ್ಷ್ಯಗಳಿಂದ ಅಂದರೆ ವಚನ **ಲಾ ಯುಝ್‌ಹಿರು** ಮತ್ತು ವಚನ **ವ ಜುಮಿಅಶ್ಶಮ್ಸು ವಲ್ ಖಮರ್** ಯಿಂದ ಸ್ವಯಂ ಈ ಹದೀಸನ್ನು ಉನ್ನತ ಎಂದು ಸಾರಿದೆ. ಆದುದರಿಂದ ನಿಸ್ಸಂಶಯವಾಗಿಯೂ ಖುರ್‌ಆನ್‌ನ ಸಾಕ್ಷ್ಯದಿಂದ ತಿಳಿದಿತ್ತು. ಹದೀಸು ದೃಢೀಕರಿಸಲ್ಪಟ್ಟಿದೆ. ಏಕೆಂದರೆ ಖುರ್‌ಆನ್ ಇಂತಹ ಎಲ್ಲ ಭವಿಷ್ಯವಾಣಿಗಳಲ್ಲಿ ಅವು ಪೂರ್ಣ ಸ್ಪಷ್ಟ ರೂಪದಲ್ಲಿ ಪೂರ್ಣಗೊಂಡಿರಬೇಕು ಅದನ್ನು ಅಪಾದನೆಯಿಂದ ರಕ್ಷಿಸುತ್ತದೆ. ಅಲ್ಲಾಹನ ಪ್ರವಾದಿಯ ಹೊರತು ಯಾರೂ ಅದನ್ನು ವಿವರಿಸಲಾರನು. ನೌಝುಬಿಲ್ಲಾಹ್ ಇದು ಅಲ್ಲಾಹನ ಗ್ರಂಥವನ್ನು ಸುಳ್ಳಾಗಿಸುವಂತಾಗುವುದು ಆದರೆ ಸ್ಪಷ್ಟ ಶಬ್ದಗಳಲ್ಲಿ ವಿವರ ನೀಡಿರಬೇಕು. ನಾನು ಸ್ಪಷ್ಟ ಮತ್ತು ಸತ್ಯ ಭವಿಷ್ಯವಾಣಿಗಳನ್ನು ತನ್ನ ಸಂದೇಶವಾಹಕರ ಹೊರತು ಇನ್ನೊಬ್ಬರಿಗೆ ಅರ್ಹತೆ ನೀಡುವುದಿಲ್ಲ. ಆದರೆ ಅದರ ವಿರುದ್ಧ ಯಾರಾದರೂ ದಾವೆ ಮಾಡಿದರೆ ಮತ್ತು ಇಂತಹ ಭವಿಷ್ಯವಾಣಿಗಳ ಬೇರೆಯವರು ಸಹ ಮಾಡಬಹುದು ಎಂದರೆ ಅವರ ಮೇಲೆ ಅಲ್ಲಾಹನ ವಹೀ ಆಗಿರಬಾರದು. ಆ ರೀತಿಯ ಆಯತ್ ವಚನ **ಲಾ ಯುಝುಹಿರು ಅಲಾ ಗೈಬಿಹೀ ಅಹದನ್** ಸುಳ್ಳಾಗಿಸಿದರೆ ಇವೆಲ್ಲ ವಿಧಾನಗಳಿಂದ ಈ ಹದೀಸಿನ ಸತ್ಯ ಸಾಬೀತಾಗಿದೆ. ಅಲ್ಲದೇ ಈ ಭವಿಷ್ಯವಾಣಿಯು ತನ್ನೆಲ್ಲ ರೀತಿಯಿಂದಲೂ ಜಾಹೀರಾಯಿತು. ಓ ಅಲ್ಲಾಹನಿಂದ ಭಯಪಡುವರೇ! ಈಗ ನನಗೆ ಹೇಳಲು ಬಿಡಿ. ಇಂತಹ ಹದೀಸಿನ ನಿರಾಕರಣೆ ಅದು ಹನ್ನೊಂದು ನೂರು ವರ್ಷಗಳಿಂದ ಉಲಮಾ, ವಿಶೇಷ ತಜ್ಞರು ಮತ್ತು ಜನತೆಯಲ್ಲಿ ಪ್ರಚಾರ ಪಡೆದಿದೆ. ಮತ್ತು ಇಮಾಮ್ ಬಾಬರ್ ಅದರ ವರದಿಗಾರರಾಗಿದ್ದಾರೆ. ಹದಿಮೂರು ನೂರು ವರ್ಷಗಳಿಂದ ಅಂದರೆ ಪ್ರಾರಂಭದಿಂದ ಇಂದಿನವರೆಗೆ ಯಾರೂ ಸಹ ಅದನ್ನು ದುರ್ಬಲ ಎನ್ನಲಿಲ್ಲ. ದಾರುಖುತುನಿ ಸಹ ಅದನ್ನು ದುರ್ಬಲ ಎನ್ನಲಿಲ್ಲ. ಖುರ್‌ಆನ್‌ನ ವಚನ **"ವ ಜುಮಿಅಶ್ಶಮ್ಸು ವಲ್ ಖಮರು"** ಅದನ್ನು ದೃಢೀಕರಿಸುತ್ತದೆ. ಅಂದರೆ ಈ ವಚನ ಸಹ ಅದೇ ಸೂರ್ಯ ಚಂದ್ರ ಗ್ರಹಣದ ಕಡೆ ಬೊಟ್ಟು ಮಾಡುತ್ತದೆ. ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ. ಯಾವುದೇ ಭವಿಷ್ಯವಾಣಿ ಪವಾಡ ರೀತಿಯಲ್ಲಿ ಸ್ಪಷ್ಟವಾಗಿ ಜಾಹೀರಾದರೆ ಅದು ಅಲ್ಲಾಹನ ಪ್ರವಾದಿಯ ಹೊರತು ಯಾವ ವ್ಯಕ್ತಿಯು ಇಷ್ಟಪಡಲು ಸಾಧ್ಯವಿಲ್ಲ. ಅದರ ನಿರಾಕರಣೆ ಮಾತ್ರ ಸತ್ಯ ವಿಶ್ವಾಸಿಗರ ಕೆಲಸವಲ್ಲ.
(ತೊಹಫಾ ಗೋಲ್ಡವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–136)

**ಒಂದು ನೂರು ರೂಪಾಯಿಗಳ ವೈಭವಯುತ ಬಹುಮಾನದ ಪಂಥಹ್ವಾನ**

ಸಯ್ಯದನಾ ಹಝ್‌ರರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಮೊದಲ ಅಪಾದನೆ ಎಂದರೆ ಈ ಹದೀಸಿನ ವರದಿಗಾರರು ಭರವಸೆಗೆ ತಕ್ಕವರಲ್ಲ. ಅದರ ಉತ್ತರ ಅಂದರೆ ವಾಸ್ತವದಲ್ಲಿ ಅದರ ವರದಿಗಾರರು ಭರವಸೆಗೆ ತಕ್ಕವರಲ್ಲ ಎಂದಾದರೆ ಅದರ ಆಕ್ಷೇಪ ದಾರುಖುತುನಿ ಮೇಲೆ ಬರುವುದು, ಅವರು ಇಂತಹ ಹದೀಸನ್ನು ಬರೆದು ಮುಸಲ್ಮಾನರಿಗೆ ಮೋಸ ಎಸಗಿದ್ದಾರೆಯೇ?

ಈ ಹದೀಸು ಭರವಸೆಗೆ ಲಾಯಕ್ಕಲ್ಲ ಎಂದಾದರೆ ದಾರಖುತುನಿ ತನ್ನ ಸರಿಯಾದ ಹದೀಸುಗಳಲ್ಲಿ ಏಕೆ ದಾಖಲಿಸಿಕೊಂಡರು? ಅದಾಗ್ಯೂ ಅವರ ಸ್ಥಾನಮಾನ ಸಹ ಬುಖಾರಿ ಯವರ ಮಟ್ಟದ್ದಾಗಿದೆ. ಅವರ ಸಾಮರ್ಥ್ಯದಲ್ಲಿ ಯಾರಿಗೂ ಸಂಶಯವಿಲ್ಲ. ಅದನ್ನು ಬರೆದು ಸಾವಿರ ವರ್ಷ ಕಳೆದಿವೆ. ಆದೆ ಇಲ್ಲಿಯವರೆಗೆ ಯಾವ ಪಂಡಿತನು ಈ ಹದೀಸನ್ನು ಚರ್ಚೆಗೆ ಒಳಪಡಿಸಿ ಅದನ್ನು ದುರ್ಬಲ ಎನ್ನಲಿಲ್ಲ. ಅಲ್ಲದೇ ಇವರ ಮೂಲಗಳಿಂದ ಅದಕ್ಕೆ ಪುಷ್ಟಿ ದೊರೆಯಲಿಲ್ಲ ಅನ್ನಲಿಲ್ಲ. ಬದಲು ಆ ಸಮಯದಿಂದ ಹಿಡಿದು ಇಲ್ಲಿಯವರೆಗೆ ಈ ಹದೀಸು ಇಸ್ಲಾಮಿ ರಾಷ್ಟ್ರಗಳಲ್ಲಿ ಪ್ರಕಾಶಗೊಂಡಿದೆ. ಎಲ್ಲ ಪೂರ್ವ ಉಲಮಾಗಳು, ಪ್ರಶಸ್ತರು ಎಲ್ಲರೂ ಈ ಹದೀಸನ್ನು ತನ್ನ ಗ್ರಂಥಗಳಲ್ಲಿ ನಮೂದಿಸುತ್ತ ಬರೆದಿದ್ದಾರೆ. ಮಹಾನ್ ಹದೀಸುಗಾರರಲ್ಲಿ ಒಬ್ಬರಾದರು. ಈ ಹದೀಸನ್ನು ದುರ್ಬಲ ಎಂದು ಸಾರಿದರೆ, ಅಥವಾ ಯಾರಾದರೂ ಈ ಹದೀಸು ದುರ್ಬಲ ಅಥವಾ ಮಹಾನ್ ಹದೀಸುಗಾರರೊಬ್ಬರ ಗ್ರಂಥದಿಂದ ಈ ಹದೀಸ್ ದುರ್ಬಲ ಎಂದು ಸಾಬೀತುಪಡಿಸಿದರೆ ನಾವು ತಕ್ಷಣದಿಂದ ಒಂದು ನೂರು ರೂಪಾಯಿ ಬಹುಮಾನ ರೂಪದಲ್ಲಿ ನಿಮಗೆ ಒಪ್ಪಿಸುವೆವು. ಎಲ್ಲಿ ಬೇಕಾದರೂ ಜಮಾ ಮಾಡಬಹುದು. ಇಲ್ಲದಿದ್ದರೆ ಅಲ್ಲಾಹನ ಭಯಪಡಿರಿ. ನನ್ನೊಂದಿಗಿನ ದ್ವೇಷದಿಂದಾಗಿ ಸರಿಯಾದ ಹದೀಸುಗಳನ್ನೂ, ಸಜ್ಜನರು ಬರೆದಂತಹ ಹದೀಸಿನ್ನು ದುರ್ಬಲ ಎನ್ನುತ್ತೀರಿ. ಅದಾಗ್ಯೂ ಇಮಾಮ ಬುಖಾರಿ ಅವರಂತೂ ಕೆಲ ರವಾಫಿಝ್ ಮತ್ತು ಖವಾರಿಜ್‌ಗಳಿಂದಲೂ, ವರದಿ ಪಡೆದುಕೊಂಡಿದ್ದಾರೆ. ಅವೆಲ್ಲ ಹದೀಸುಗಳನ್ನು ಏಕೆ ಸರಿ ಎನ್ನುತ್ತೀರಿ? ಓದುಗರ ನಿರ್ಣಯಕ್ಕೆ ಸುಲಭವಾಗಿದೆ. ಯಾರಾದರೂ ಈ ಹದೀಸನ್ನು ದುರ್ಬಲ ಎನ್ನುವುದಾದರೆ ಅವರು ಹದೀಸುಗಾರರ ಸಾಕ್ಷ್ಯ ಒದಗಿಸಲಿ, ನಾವು ದೃಢವಾಗಿ ವಾಗ್ದಾನ ನೀಡುತ್ತೇವೆ. ನಾವು ಅವರಿಗೆ ಒಂದು ನೂರು ರೂಪಾಯಿ ಬಹುಮಾನ ರೂಪದಲ್ಲಿ ಕೊಡುವೆವು. ಬೇಕಾದರೆ ಈ ರೂಪಾಯಿಗಳು ಸಹ ಮೌಲ್ವಿ ಅಬು ಸಯೀದ್ ಮುಹಮ್ಮದ್ ಹುಸೇನ್ ಸಾಹಿಬ್‌ರವರ ಬಳಿ ತಮ್ಮ ಮನಸ್ಸಿನ ನೆಮ್ಮದಿಗೋಸ್ಕರ ಮೇಲ್ಕಾಣಿಸಿದ ಶರತ್ತುಗಳ ಪ್ರಕಾರ ಜಮಾ ಮಾಡಿಸಿಕೊಳ್ಳಲಿ. ಈ ಹದೀಸ್ ದುರ್ಬಲ ಇಲ್ಲ ಎಂದಾದರೆ ಸುಳ್ಳಿನ ಅಪಾದನೆಯಿಂದ ಅದು ಮುಕ್ತವಾದರೆ, ಅದು ಪರಿಶುದ್ಧವಾಗಿದ್ದರೆ, ಭಯಭಕ್ತಿ ಮತ್ತು ಸತ್ಯವಿಶ್ವಾಸಿಗರ ಹೊಣೆಯಾಗಿದೆ ಅದನ್ನು ಸ್ವೀಕರಿಸಬೇಕು. (ತೊಹ್‌ಫ ಗೊಲಡ್ವಿಯ, ರೂಹಾನಿ ಖಝಾಈನ್ ಸಂಪುಟ–17, ಪುಟ–133)

**ನಾನು ಖಾನ ಕಅಬ (ಮಕ್ಕ ಮಸೀದಿ) ಯಲ್ಲಿ ನೀನು ನಿಂತು ಆಣೆ ಮಾಡುವೆನು. ಈ ದೃಷ್ಟಾಂತ ನನ್ನ ಸತ್ಯದ ಪರವಾಗಿ ಆಗಿರುತ್ತದೆ.**

ಸಯ್ಯದನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ, ಅವನು ನನ್ನ ಸತ್ಯಕ್ಕಾಗಿ ಆಕಾಶದ ಮೇಲೆ ಈ ದೃಷ್ಟಾಂತವನ್ನು ಪ್ರಕಟಪಡಿಸಿದ್ದಾನೆ. ಎಂತಹ ಸಮಯದಲ್ಲಿ ಅದನ್ನು ಪ್ರಕಟಪಡಿಸಿದ್ದಾನೆಂದರೆ ಮೌಲ್ವಿಗಳು ನನ್ನ ಹೆಸರು ದಜ್ಜಾಲ್, ಸುಳ್ಳುವಾದಿ ಮತ್ತು ಗಫರ್ ಅಲ್ಲದೇ ಬಲವಾದ ಕಾಫಿರ್ ಎಂದರು..... ನಾನು ಖಾನ ಕಅಬ (ಮಕ್ಕ ಮಸೀದಿ) ದಲ್ಲಿ ನಿಂತು ಆಣೆ ಮಾಡುವೆನು. ಈ ದೃಷ್ಟಾಂತ ನನ್ನ ಸತ್ಯಕ್ಕಾಗಿಯಾಗಿದೆಯೇ ಹೊರತು ಯಾವನೇ ವ್ಯಕ್ತಿಯ ಪರವಾಗಿಲ್ಲ. ಅವನಿಗೆ ಇನ್ನೂ ಯಾರೂ ಸುಳ್ಳಾಗಿಸಿಲ್ಲ. ಅವನ ಮೇಲೆ ಸುಳ್ಳುವಾದಿ ಕಾಫಿರ್ ಎಂದು ಬೊಬ್ಬೆ ಇಡಲಿಲ್ಲ. ಅಂತೆಯೇ ನಾನು ಖಾನ ಕಅಬಾದಲ್ಲಿ ನಿಂತು ಪ್ರಮಾಣ ವಹಿಸಿ ಹೇಳಬಲ್ಲೆ. ಈ ದೃಷ್ಟಾಂತದಿಂದ ಶತಮಾನದ ನಿಗದಿಯು ಆದಂತಾಯಿತು. ಏಕೆಂದರೆ ಈ ದೃಷ್ಟಾಂತ 14ನೇ ಶಥಮಾನದಲ್ಲಿ ಒಬ್ಬ ವ್ಯಕ್ತಿಯ ಸತ್ಯಸಾಕ್ಷ್ಯಕ್ಕಾಗಿ ಪ್ರಕಟವಾಗಿದೆ. ಅಂತೂ ದೃಢವಾಯಿತು ಹಝ್‌ರತ್ ರಸೂಲುಲ್ಲಾಹ್(ಸ) ರವರು ಮಹದಿಯ ಆಗಮನಕ್ಕಾಗಿ ಹದಿನಾಲ್ಕನೇ ಶತಮಾನ ನಿಗದಿಪಡಿಸಿದ್ದರು. (ಅದೇ ಪಟ 143)

**ಅಲ್ಲಾಹನ ದೃಷ್ಟಾಂತ ನೋಡಿಯೂ ನಿರಾಕರಿಸುವರು ಭಯಭಕ್ತಿವುಳ್ಳವರಾಗಲು ಸಾಧ್ಯವಿಲ್ಲ.**

ಸಯ್ಯದನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಈ ಸೂರ್ಯ ಚಂದ್ರ ಗ್ರಹಣವು ದೃಷ್ಟಾಂತ ಅಲ್ಲವೇ, ಈ ಚಂದ್ರ ಸೂರ್ಯ ಗ್ರಹಣ ವಾಗ್ದತ್ತ ಮಹದಿಯ ಆಗಮನದ ಘಟ್ಟ ಅಲ್ಲವೇ. ಅವನಿಗೆ ಸುಳ್ಳಾಗಿಸಲಾಯಿತು. ಅವನಿಗೆ ಕಾಫಿರ್ ಎನ್ನಲಾಯಿತು. ಏಕೆಂದರೆ ಅಂತಹವನ ಸತ್ಯಕ್ಕಾಗಿಯೇ ಈ ದೃಷ್ಟಾಂತವಿರುತ್ತದೆ. ಅಕಟಾಕಟ! ನಮ್ಮ ಮೂಢ ಉಲಮಾಅಗಳು, ಹಟಮಾರಿ ದರವೇಶರು ಯೋಚಿಸುವುದಿಲ್ಲ. ಪೂರ್ವ ಕಾಲದಲ್ಲಿ ಮತ್ತು ಹದೀಸುಗಳಲ್ಲಿ ಮಹದಿ ಮೌಊದ್‌ರವರಿಗೆ ಅದೇ ದೃಷ್ಟಾಂತ ನಿಗದಿ ಆಗಿತ್ತು. ಮೊದಲು ಅವನಿಗೆ ಕಾಫಿರ್ ಎಂದು ಬೊಬ್ಬೆ ಇಡುವರು. ಮತ್ತೆ ಅವನ ಸತ್ಯಸಾಕ್ಷಿಗೋಸ್ಕರ ಆಕಾಶದ ಮೇಲೆ ರಂಝಾನ್ ತಿಂಗಳಿನಲ್ಲಿ ಚಂದ್ರ, ಸೂರ್ಯಗ್ರಹಣ ಉಂಟಾಗುವುದು ಎಂದಿತ್ತು. ಅಂತೂ ಅತ್ಯಂತ ಸ್ಪಷ್ಟ ರೂಪದಲ್ಲಿ ಆ ದೃಷ್ಟಾಂತ ಗೋಚರವಾಯಿತು. ಇಷ್ಟೆಲ್ಲ ಸ್ಪಷ್ಟವಾದ ದೃಷ್ಟಾಂತ ನೋಡಿಯೂ ಸತ್ಯ ಸ್ವೀಕರಿಸದವರು ಭಯಭಕ್ತಿವುಳ್ಳವರು ಸಜ್ಜನರು ಎನ್ನಲಾಗುವುದೇ. ಅವರ ಹೃದಯಗಳಲ್ಲಿ ಭಯವುಂಟಾಗುವುದಿಲ್ಲ. ಅವರ ಹೃದಯಗಳ ಮೇಲೆ ಇದೆಂತಹ ಬೀಗಗಳು ಬಿದ್ದಿವೆ, ಅವರು ಒಂದಿಷ್ಟು ಸಹ ಸತ್ಯಪರ ವಹಿಸಲಿಲ್ಲ. (ಝಮೀಮು ರಿಸಾಲ ಅಂಜಾಮ್ ಆಥಮ್, ಸಂಪುಟ–11, ಪುಟ–296)

ಮುಂದೆ ಇನ್‌ಶಾಅಲ್ಲಾಹ್ ನಾವು ಸಯ್ಯದನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೊ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ. **(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2022-2023ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2022 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ E-mail ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

Weekly **BADAR** Qadian

Distt: Gurdaspur (Pb.) INDIA Qadian - 143516

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

Postal Reg. No: 3000039689/2020-22 Vol No.03, Thursday, 23 June 2022, Issue No. 25

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 24ರ ಉಳಿದ ಭಾಗ)**

* Osnarucker Zaiting ತನ್ನ 9 ಜೂನ್ 2015 ರ ಮುದ್ರಣದಲ್ಲಿ ಮಸ್ಜಿದ್ ಬೈತುಲ್ ಖಾದಿರ್ ನಿಮಿತ್ತ ಉದ್ಘಾಟನಾ ಸುದ್ದಿ ಪ್ರಕಟಿಸುತ್ತಾ ಬರೆದಿತ್ತು.

Niedersachsen ನಲ್ಲಿ ಮುಸ್ಲಿಂ ಜಮಾಅತ್ ಒಂದು ಹೊಸ ಮಸೀದಿಯನ್ನು ಉದ್ಘಾಟಿಸಿದೆ. ಅಹ್ಮದಿಯಾ ಮುಸ್ಲಿಂ ಜಮಾತಿನ ಎರಡು ಕಟ್ಟಡವು 9 ಮೀಟರ್‌ನಷ್ಟು ಎತ್ತರದ ಎರಡು ಗೋಪುರಗಳನ್ನು ಹೊಂದಿದೆ ಮತ್ತು ಒಂದು ಗುಂಬಝ್ ಇದೆ.

ಈ ಸಂತಸದ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಆಧ್ಯಾತ್ಮಿಕ ನೇತಾರರಾದ ಮಿರ್ಝಾ ಮಸ್ರೂರ್ ಅಹ್ಮದ್ ಭಾಗವಹಿಸಿದ್ದಾರೆ. ಜರ್ಮನಿಯಾದ್ಯಂತ ಈ ಜಮಾಅತಿನ 47 ಮಸೀದಿಗಳು ಮತ್ತು 37 ಸಾವಿರ ಸದಸ್ಯರಿದ್ದಾರೆ. Niedersachsen ರಾಜ್ಯದಲ್ಲಿ ಅವರ Dsnabruck Hanoven ಮತ್ತು Rremen ನಲ್ಲಿ ಮಸೀದಿಗಳಿವೆ. ಅಹ್ಮದಿಯಾ ಮುಸ್ಲಿಂ ಜಮಾಅತ್ ತನ್ನನ್ನು ಒಂದು ಸುಧಾರಕ ಸಂಘಟನೆ ಎಂದು ಭಾವಿಸುತ್ತಿದೆ. 1889 ರಲ್ಲಿ ಭಾರತದಲ್ಲಿ ಈ ಜಮಾಅತಿನ ನಿರ್ಮಾಣ ಹಾಕಲಾಯಿತು.

Vechta ನಗರದ ಉಪಮೇಯರ್ ಹೇಳಿದರು. ಗೌರವ ಸಮಾನತೆ ಮತ್ತು ಹೃದಯ ವೈಶಾಲ್ಯದಿಂದ ವರ್ತಿಸಿದರೆ ಎಲ್ಲಾ ದ್ವೇಷಗಳು ಹತ ಮಾಡಬಹುದಾಗಿದೆ. ಎಲ್ಲರೂ ಆ ಮೂಲಕವೇ ಶಾಂತಿ ಸ್ಥಾಪಿಸ ಬಹುದಾಗಿದೆ.

(ಈ ಪತ್ರಿಕೆ Osnasoncrer zeiting ದಿನಪತ್ರಿಕೆಯಾಗಿದೆ ಮತ್ತು 1,59,510 ಸಂಖ್ಯೆಯಲ್ಲಿ ಅದು ಪ್ರಸಾರಗೊಳ್ಳುತ್ತಿದೆ).

ಅದೇ ರೀತಿ Iserlohn ನ ಮಸ್ಜಿದ್ ಬೈತುಸ್ಸಲಾಂನ ಅಡಿಗಲ್ಲು 50 ವರ್ಷದಲ್ಲಿ WDR ತನ್ನ website ಪ್ರಕಟಿಸಿತು. WDR ಮಸೀದಿ ಇರುವ ಕ್ಷೇತ್ರದ ತುಂಬಾ ಹಳೆಯದಾದ ಮತ್ತು ಒಂದು ಪ್ರಮುಖವಾದ ರಾಜ್ಯ TV ಚ್ಯಾನೆಲ್ ಆಗಿದೆ. 1956 ರಿಂದ ಈ ಚಾನಲ್ ಚಾಲನೆಯಲ್ಲಿದೆ. ಈ ಚಾನಲ್ ಸುದ್ದಿ ನೀಡುತ್ತಾ ಹೇಳಿದೆ.

ಮಂಗಳವಾರ ದಿನ Isenlohn ಮಸೀದಿಯ ಅಡಿಗಲ್ಲು ಹಾಕಲಾಗಿತ್ತು. ಅದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಸೀದಿಯಾಗಿದೆ. ಈ ಮಸೀದಿಯ ಗುಂಬಝಿನ ವಿಸ್ತೀರ್ಣ 8 ಮೀಟರ್ ಆಗಿರುವುದು ಮತ್ತು ಅದರ ಗೋಪುರ 12 ಮೀಟರ್ ಆಗಿರುವುದು. ಈ ಅಡಿಗಲ್ಲು ಸಮಾರಂಭದಿಂದಾಗಿ ಜಮಾಅತಿನ ಸದಸ್ಯರು ತುಂಬಾ ಹರ್ಷಿತರಾಗಿದ್ದಾರೆ.

2010 ರಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿ ಮಸೀದಿ ನಿರ್ಮಿಸಲು ಅರ್ಜಿ ಕೊಟ್ಟಿತ್ತು. ಆ ಸಮಯ ವಿರೋಧ ವ್ಯಕ್ತವಾಯಿತು. ಆದರೆ ವಿರೋಧಿಗಳ ಸಂಖ್ಯೆ ಕಡಿಮೆಯಾಗಿತ್ತು. ನ್ಯಾಯಾಲಯದಲ್ಲೂ ಪರಿಹಾರಕ್ಕಾಗಿ ಕಾರ್ಯ ನಡೆಯಿತು. ಆದರೆ ಅದು ರದ್ದುಪಡಿಸಲಾಯಿತು.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಬಾಂಧವರು isenlohn ಅನ್ನು ತನ್ನ ಜನ್ಮಸ್ಥಳವೆಂದು ಭಾವಿಸುತ್ತಾರೆ. ಅವರು ಇವರ ಧರ್ಮಗಳನ್ನು ಸಹ ಆಹ್ವಾನಿಸುತ್ತಾರೆ ಮತ್ತು ಶಾಂತಿಯ ಶಿಕ್ಷಣ ಪ್ರಸ್ತುತಪಡಿಸುತ್ತಾರೆ. ಮಸೀದಿಯ ಸಂಪೂರ್ಣ ಖರ್ಚು ಚಂದಾದಿಂದಲೇ ನಿರ್ವಹಿಸಿಕೊಳ್ಳುತ್ತಾರೆ.

### 10 ಜೂನ್ 2015 ಬುಧವಾರ, ಜರ್ಮನಿಯಿಂದ ನಿರ್ಗಮನ ಮತ್ತು ಲಂಡನ್‌ಗೆ ಆಗಮನ

* ಮುಂಜಾನೆ 4 ಗಂಟೆಗೆ, ಹುಝೂರೆ ಅನ್ವರ್ (ಅಬಿಅ) ಮಸ್ಜಿದ್ ಬಿಶಾರತ್ ಓಸ್ನಾಬರೂಕ್‌ನಲ್ಲಿ ಫಝರ್ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತನ್ನ ವಸತಿ ಭಾಗಕ್ಕೆ ತೆರಳಿದರು.

* ಇಂದಿನ ಕಾರ್ಯಕ್ರಮದನ್ವಯ ಜರ್ಮನಿ ಓಸ್ನಾಬದೂಕ್‌ನಿಂದ ಲಂಡನ್‌ಗೆ (ಬ್ರಿಟಾನಿಯಾ) ನಿರ್ಗಮಿಸಬೇಕಾಗಿತ್ತು. ಸ್ಥಳೀಯ ಜಮಾಅತ್‌ನಿಂದ ಪುರುಷರು ಸ್ತ್ರೀಯರು, ಬಾಲಕ-ಬಾಲಕಿಯರು, ವೃದ್ಧರು ತಮ್ಮ ಪ್ರೀತಿಯ ನೇತಾರರನ್ನು ಬೀಳ್ಕೊಡಲು ಮುಂಜಾನೆಯಿಂದಲೇ ಮಸೀದಿಯ ಹೊರಗಿನ ಆವರಣದಲ್ಲಿ ಸೇರತೊಡಗಿದ್ದರು.

* ಮುಂಜಾನೆ 10 ಗಂಟೆ 45 ನಿಮಿಷಕ್ಕೆ ಹುಝೂರ್ ಅನ್ವರ್ ತಮ್ಮ ವಸತಿ ಪ್ರದೇಶದಿಂದ ಹೊರಗೆ ಬಂದರು. ಸಣ್ಣ ಬಾಲಕ ಬಾಲಕಿಯರು ತಂಡದ ರೂಪದಲ್ಲಿ ಬೀಳ್ಕೊಡುವ ಗೀತೆಗಳನ್ನು ಹಾಡುತ್ತಿದ್ದರು.

ಹುಝೂರೆ ಅನ್ವರ್ ಬಾಲಕ ಬಾಲಕಿಯರಿಗೆ ಚಾಕ್ಲೇಟುಗಳನ್ನು ನೀಡಿದರು. ಅನಂತರ ಪ್ರಮಾಣ ಬೆಳೆಸುವ ಮುನ್ನ ದುಆ ಮಾಡಿಸಿದರು.

* ದುಆ ಆದ ನಂತರ ಹುಝೂರೆ ಅನ್ವರ್ ಎಲ್ಲರಿಗೂ ಸಲಾಂ ಹೇಳಿ ಪ್ರಯಾಣ ಬೆಳೆಸಿದರು. ಪುರುಷ ಸ್ತ್ರೀಯರು ಸೇರಿ ನಿರಂತರವಾಗಿ ತಮ್ಮ ಕೈ ಬೀಸುತ್ತಾ ತನ್ನ ಪ್ರೀತಿಯ ಇಮಾಮರಿಗೆ ವಿದಾಯ ಕೋರುತ್ತಿದ್ದರು. ಹಲವರ ಕಣ್ಣುಗಳು ತೇವಗೊಂಡಿದ್ದವು. ಮತ್ತು ಈ ವಿರಹದ ಕ್ಷಣಗಳು ಅವರಿಗೆ ಕಠಿಣ ಎನಿಸುತ್ತಿದ್ದವು.

* ಓಸ್ನಾಬರೂಕ್‌ನಿಂದ ಫ್ರಾನ್ಸ್‌ನ ಹಡಗು ನಿಲ್ದಾಣ Calais ರವರೆಗಿನ ಪ್ರಯಾಣ 580 ಕಿ.ಮೀರದ್ದಾಗಿತ್ತು. ರಸ್ತೆಯಲ್ಲಿ ಹಾಲೆಂಡ್ ಮತ್ತು ಬೆಲ್ಜಿಯಂ ಮೂಲಕ ಹಾದು ಹೋಗಬೇಕಾಗಿತ್ತು. ಸುಮಾರು 360 ಕಿ.ಮೀ ಬಸ್ಸಿನ ಪ್ರಯಾಣದ ನಂತರ ಮಧ್ಯಾಹ್ನ ಸಮಯಕ್ಕೆ ಕಾರ್ಯಕ್ರಮದನ್ವಯ ಬೆಲ್ಜಿಯಂನಲ್ಲಿ ರಸ್ತೆಯಲ್ಲಿರುವ Armst ಸ್ಥಳದ ಒಂದು ರೆಸ್ಟೋರೆಂಟಿನಲ್ಲಿ ಮಧ್ಯಾಹ್ನದ ಊಟಕ್ಕಾಗಿ, ಜರ್ಮನಿ ಜಮಾಅತಿನ ಖುದ್ದಾಮರ ಒಂದು ತಂಡ ಅವರ ಬರುವಿಕೆಯ ಮುಂಚಿತವಾಗಿಯೇ ಊಟದ ಮತ್ತು ನಮಾಝ್ ನಿರ್ವಹಣೆಗೆ ವ್ಯವಸ್ಥೆ ಸಿದ್ಧಪಡಿಸಿ ಕಾಯುತ್ತಿದ್ದರು.

* ಅದೇ ಹೋಟೆಲಿನ ಒಂದು ಭಾಗದಲ್ಲಿ ನಮಾಝ್ ನಿರ್ವಹಣೆಗಾಗಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅಬಿಅ) ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅನಂತರ ಊಟ ಮುಗಿಸಿಕೊಂಡು 3 ಗಂಟೆಗೆ ಇಲ್ಲಿಂದ ಹೊರಡುವ ಮುಂಚೆ ಆತ್ಮೀಯವಾಗಿ ಜರ್ಮನಿಯಿಂದ ಬಂದ ವರಿಗೆ ಹಸ್ತಲಾಘವದ ಭಾಗ್ಯ ದಯಪಾಲಿಸಿದರು.

* ಅಹ್ಮದಿಯಾ ಜಮಾಅತ್ ಜರ್ಮನಿಯ ಅಮೀರರಾದ ಅಬ್ದುಲ್ಲ ವಾಗಸ್ ಹೌಝೂರ್ ಸಾಹಿಬ್, ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ ಮುಕರ್ರಮ್ ಹೈದರ್ ಅಲಿ ಝುಫರ್ ಸಾಹಿಬ್, ಕಾರ್ಯದರ್ಶಿ ಮುಕರ್ರಮ್ ಇಲ್ಯಾಸ್ ಅಹ್ಮದ್ ಮಜೂರ್ ಸಾಹಿಬ್, ಸಹಾಯಕ ಜಂಟಿ ಕಾರ್ಯದರ್ಶಿ ಮುಕರ್ರಮ್ ಯಾಹ್ಯಾ ಸಾಹಿಬ್, ಮುಕರ್ರಮ್ ಅಬ್ದುಲ್ಲಾ ಸುಪ್ರಾ ಸಾಹಿಬ್ ಅಧ್ಯಕ್ಷರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ ಮತ್ತು ಅವರ ಜೊತೆಯಲ್ಲಿ ಆಗಮಿಸಿದ ರಕ್ಷಣಾ ತಂಡ ಹುಝೂರೆ ಅನ್ವರ್‌ರೊಂದಿಗೆ ಹಸ್ತಲಾಘವ ಪಡೆಯುವ ಭಾಗ್ಯ ಪಡೆದರು. ಈ ಸಂದರ್ಭದಲ್ಲಿ ಆ ಎಲ್ಲ ಬಾಂಧವರು ಹುಝೂರೆ ಅನ್ವರ್ ಅವರೊಂದಿಗೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

* ಮೂರು ಗಂಟೆಗೆ ಇಲ್ಲಿಂದ ಫ್ರಾನ್ಸ್‌ನ ಹಡಗು ನಿಲ್ದಾಣ Calus ನತ್ತ ಪ್ರಯಾಣ ಪ್ರಾರಂಭವಾಯಿತು. ಇನ್ನು 125 ಕಿ.ಮೀ ಹೆಚ್ಚಿನ ದೂರ ಪ್ರಯಾಣಿಸಿದ ನಂತರ ಬೆಲ್ಜಿಯಂ ಸರಹದ್ದು ಪಾರು ಮಾಡಿ ಫ್ರಾನ್ಸ್‌ನಲ್ಲಿ ಪ್ರವೇಶ ಮಾಡಿದರು. ಇಲ್ಲಿಂದ Culais 95 ಕಿ.ಮೀ ದೂರದಲ್ಲಿದೆ.

* ಆರು ಗಂಟೆಗೆ ಚಾನಲ್ ಟನಲ್ ತಲುಪಿದರು. ಜರ್ಮನ್‌ನಿಂದ ಜೊತೆಯಲ್ಲಿ ಬಂದ ಬಾಂಧವರು ಮತ್ತು ಖುದ್ದಾಮ್ ರಕ್ಷಣ ತಂಡ ಹುಝೂರೆ ಅನ್ವರ್ ಅವರಿಗೆ ಚಾನಲ್ ಟವರ್‌ವರೆಗೆ ಬೀಳ್ಕೊಟ್ಟು ವಿದಾಯ ಕೋರುತ್ತ, ಹುಝೂರ್ ಅನ್ವರ್ ಅವರಿಗೆ ಲಂಡನ್‌ಗೆ ವಿದಾಯ ಕೋರಿ ಮರಳಿ ಫ್ರೆಂಕ್‌ಫರ್ಟ್ (ಜರ್ಮನಿ) ಗೆ ಪ್ರಯಾಣ ಬೆಳೆಸಿದರು.

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.